# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 161 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 27.12.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 161 • PRGI No:KARKAN/2023/88055 • VIJAYANAGARA • 27.12.2024 • Friday • Page:04 • Rs:2









## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 26–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.64 ಅಡಿ |
| ಒಳ ಹರಿವು | 331 ಕ್ಯುಸೆಕ್ |
| ಹೊರ ಹರಿವು | 7389 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 85.465 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1589.42 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 103 ಕ್ಯುಸೆಕ್ |
| ಸಾಮರ್ಥ್ಯ | 10.556 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

27–12–2024 – ಶುಕ್ರವಾರ

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಭರಣಿ |
| ಯೋಗ | : ಧೃತಿ |
| ಕರಣ | : ಕೌಳವ |
| ಸೂರ್ಯೋದಯ | : 07:07:50 |
| ಸೂರ್ಯಾಸ್ತ | : 17:48:38 |
| ರಾಹು ಕಾಲ | : 11:08–12:28 |
| ಯಮಘಂಡ ಕಾಲ | : 15:08–16:29 |
| ಗುಳಿಕ ಕಾಲ | : 08:28–09:48 |

# ಕಾಣುವ ಕಲ್ಪನೆಗಳನ್ನು ವಾಸ್ತವಕ್ಕೆ ಪರಿವರ್ತಿಸುವುದೆ ಶಿಕ್ಷಣದ ಶಕ್ತಿ

## ಹೊಸಪೇಟೆ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ಎಸ್.ಟಿ.ಇ.ಎಮ್. ಕಾರ್ಯಾಗಾರ

### ಮುನಿರಾಬಾದ್‌ನ ಇನ್ಸ್ಟಿಟ್ಯೂಶನ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಅಧ್ಯಕ್ಷ ಡಾ. ಎಸ್.ಎಂ. ಶಶಿಧರ್ ಹೇಳಿಕೆ




■ **ಹಂಪಿ ಟೈಮ್ಸ್ ಹೊಸಪೇಟೆ**

ಕಾಣುವ ಕಲ್ಪನೆಗಳನ್ನು ವಾಸ್ತವಕ್ಕೆ ಪರಿವರ್ತಿಸುವುದು ಶಿಕ್ಷಣದ ನಿಜವಾದ ಶಕ್ತಿಯಾಗಿದೆ. ಜ್ಞಾನ ಮತ್ತು ಕೌಶಲ್ಯಗಳಿಂದ ಮುಂದಿನ ಪೀಳಿಗೆಯನ್ನು ಸಬಲಗೊಳಿಸಲು, ಸಮಾಜವನ್ನು ಸುಧಾರಿಸಲು ನೆರವಾಗುತ್ತದೆ ಎಂದು ಮುನಿರಾಬಾದ್‌ನ ಇನ್ಸ್ಟಿಟ್ಯೂಶನ್ ಆಫ್ ಇಂಜಿನಿಯರ್ಸ್ ಸಂಸ್ಥೆಯ ಅಧ್ಯಕ್ಷ ಡಾ. ಎಸ್.ಎಂ. ಶಶಿಧರ್ ಹೇಳಿದರು.

ನಗರದ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ 'ಪಿಎಂಶ್ರೀ ಯೋಜನೆ' ಅಡಿಯಲ್ಲಿ ಆಯೋಜಿಸಲಾದ ವಿಜ್ಞಾನ, ತಂತ್ರಜ್ಞಾನ, ಇಂಜಿನಿಯರಿಂಗ್, ಮತ್ತು ಗಣಿತ (ಎಸ್.ಟಿ.ಇ.ಎಮ್.) ಕುರಿತ ವಿಶೇಷ ಕಾರ್ಯಾಗಾರದಲ್ಲಿ ತಜ್ಞ ಸಂಪನ್ಮೂಲ ವ್ಯಕ್ತಿಯಾಗಿ ಗುರುವಾರ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಸಮಾಜದ ಸಮಸ್ಯೆಗಳಿಗೆ ಪ್ರಾಯೋಗಿಕ ಪರಿಹಾರಗಳನ್ನು ಹುಡುಕುವಲ್ಲಿ ಎಸ್.ಟಿ.ಇ.ಎಮ್. ಕ್ಷೇತ್ರ ಮುಖ್ಯ ಪಾತ್ರ ವಹಿಸುತ್ತದೆ ಮತ್ತು ನವೀನತೆಯನ್ನು ಬೆಳೆಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಉದ್ದೀಪಿಸುತ್ತದೆ," ಎಂದು ಡಾ. ಶಶಿಧರ್ ಅವರು ವಿವರಿಸಿದರು.



"ನಿಮ್ಮ ಕುತೂಹಲವನ್ನು ಸದಾ ಜೀವಂತ ವಾಗಿರಿಸಿ, ಹೊಸ ಹಾದಿಗಳನ್ನು ಅನ್ವೇಷಿಸಿ ಮತ್ತು ಕಲಿಯುವಿಕೆಯನ್ನು ಎಂದಿಗೂ ನಿಲ್ಲಿಸಬೇಡಿ" ಎಂದು ವಿದ್ಯಾರ್ಥಿಗಳಿಗೆ ಅವರು ಕಿವಿಮಾತು ಹೇಳಿದರು.

ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ಮನೋಹರ ಲಾಲ್ ಜೀಂಗರ್ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, "ವಿದ್ಯಾರ್ಥಿಗಳಲ್ಲಿ ಜಾಗತಿಕ ವಿದ್ಯಮಾನಗಳ ಬಗೆಗೆ ಜಾಗೃತಿ ಮತ್ತು ಅರಿವು ಮೂಡಿಸಲು ಪಿಎಂ ಶ್ರೀ ಯೋಜನೆಯ ಅಡಿಯಲ್ಲಿ ವಿಶೇಷ ಸರಣಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪಿಎಂ ಶ್ರೀ ಯೋಜನೆ ಅಡಿಯಲ್ಲಿ ಹೊಸಪೇಟೆಯ ಕೇಂದ್ರೀಯ ವಿದ್ಯಾಲಯ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಮಾದರಿ ಶಾಲೆಯಾಗಿ ರೂಪುಗೊಳ್ಳುತ್ತಿದೆ" ಎಂದು ತಿಳಿಸಿದರು.

ಪಿಎಂ ಶ್ರೀ ಯೋಜನೆಯ ಸಂಯೋಜಕ ಬಿ.ಆರ್.ಎಸ್. ರೆಡ್ಡಿ (ಟಿಜಿಟಿ ಸಾಮಾಜಿಕ ವಿಜ್ಞಾನ) ಉಪಸ್ಥಿತರಿದ್ದರು.

ಶಾಲೆಯ ಶಿಕ್ಷಕರಾದ ಎಸ್ ಕೆ ಪ್ರಕಾಶ್ (ಟಿಜಿಟಿ ಇಂಗ್ಲಿಷ್) ಕಾರ್ಯಕ್ರಮವನ್ನು ನಿರೂಪಿಸಿದರು. ವಿದ್ಯಾರ್ಥಿನಿಯರಾದ ಪ್ರಾರ್ಥನಾ ಅತಿಥಿಗಳ ಪರಿಚಯ ಮಾಡಿದರು. ಬಿ ಶ್ರೇಯಾ ಬಿ. ಯಾದವಾಡ ವಂದಿಸಿದರು.

ಬೆಳಗ್ಗೆ ಮತ್ತು ಮಧ್ಯಾಹ್ನದ ಎರಡು ಕಾರ್ಯಕ್ರಮಗಳಲ್ಲಿ ಶಾಲೆಯ ಶಿಕ್ಷಕರು, ಸಿಬ್ಬಂದಿ ವರ್ಗ ಹಾಗೂ ಎರಡು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಗಾರದಲ್ಲಿ ವಿದ್ಯಾರ್ಥಿಗಳು ಡಾ.ಎಸ್.ಎಂ.ಶಶಿಧರ್ ಅವರೊಂದಿಗೆ ಸಂವಾದದಲ್ಲಿ ಪಾಲ್ಗೊಂಡು, ತಮ್ಮ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದುಕೊಂಡರು.

# ಸಂಘಟನಾ ಕಾರ್ಯದರ್ಶಿಯಾಗಿ ಕೊಟ್ರೇಶ್ ಸೊನ್ನದ್ ಆಯ್ಕೆ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**



ಜಿಲ್ಲಾ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿಯಾಗಿ ತಾಲೂಕಿನ ಅಂಕಸಮುದ್ರ ಪ್ರೌಢಶಾಲೆ ಶಿಕ್ಷಕ, ಇಂಂಗ್ಲೀಷ್ ರಾಜ್ಯ ಸಂಪನ್ಮೂಲ ವ್ಯಕ್ತಿ ಕೊಟ್ರೇಶ್ ಸೊನ್ನದ್ ಇವರನ್ನು ನೇಮಕಗೊಳಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಎಂ.ಜಿ.ಮನೋಹರ್ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಸಂಘದ ಸಂಘಟನೆಯನ್ನು ಬಲಪಡಿಸುವಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವಂತೆ ಸೂಚಿಸಿದ್ದಾರೆ. ಸಂಘದ ಜಿಲ್ಲಾಧ್ಯಕ್ಷರು ನೀಡಿದ ಹೊಣೆಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಲಾಗುವುದು, ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ಕೈಗೊಳ್ಳಲಾಗುವ ಹೋರಾಟಗಳು ಮತ್ತು ಕಾರ್ಯಕ್ರಮಗಳಿಗೆ ಕೈಜೋಡಿಸಲಾಗುವುದು ಎಂದು ಕೊಟ್ರೇಶ್ ತಿಳಿಸಿದ್ದಾರೆ.

# ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ಡಿ. ೩೦ ರಂದು ಪೂರ್ವಭಾವಿ ಸಭೆ

■ **ಹಂಪಿ ಟೈಮ್ಸ್ ಕೊಪ್ಪಳ**

2025ರ ಜನವರಿ 15ರಂದು ನಡೆಯಲಿರುವ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ಯಶಸ್ವಿಗೊಳ್ಳಲು ಮತ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ಡಿಸೆಂಬರ್ 30 ರಂದು ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಖುದ್ದಾಗಿ ತಪ್ಪದೇ ಸಭೆಗೆ ಹಾಜರಾಗುವಂತೆ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಉತ್ತಮ ಆಹಾರ ಆಯ್ಕೆಯಿಂದ ಆರೋಗ್ಯ

## ಉಪನ್ಯಾಸಕ ಡಾ.ದಯಾನಂದ ಕಿನ್ನಾಳ ಹೇಳಿಕೆ । ಎನ್‌ಎಸ್‌ಎಸ್ ಶಿಬಿರ



■ **ಹಂಪಿ ಟೈಮ್ಸ್ ಹೊಸಪೇಟೆ**

ಯುವ ಜನತೆ ಫಾಸ್ಟ್ ಮತ್ತು ಜಂಕ್ ಫುಡ್‌ಗಳಿಗೆ ಮೊರೆಹೋಗಿ ತಮ್ಮ ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತಿರುವುದು ವಿಷಾದ ನಿಯ. ಆರೋಗ್ಯಕರ ಬದುಕಿಗೆ ಉತ್ತಮ ಆಹಾರ ಆಯ್ಕೆಯತ್ತ ಗಮನಹರಿಸಬೇಕು ಎಂದು ಉಪನ್ಯಾಸಕ ಡಾ.ದಯಾನಂದ ಕಿನ್ನಾಳ ಹೇಳಿದರು.

ತಾಲೂಕಿನ ಮಲಪನಗುಡಿಯಲ್ಲಿ ವಿಜಯನಗರ ಪ.ಪೂ.ಕಾಲೇಜ್‌ವತಿಯಿಂದ ಜರುಗಿದ ಎನ್‌ಎಸ್‌ಎಸ್ ಶಿಬಿರದಲ್ಲಿ ಗುರುವಾರ ಉಪನ್ಯಾಸದಲ್ಲಿ ಮಾತನಾಡಿದರು. ಆರೋಗ್ಯವಂತರಾಗಿದ್ದರೆ ಮಾತ್ರ ಅಂದುಕೊಂಡ ಗುರಿಯನ್ನು ಸಾಧಿಸಲು ಸಾಧ್ಯ. ಆರೋಗ್ಯ ನಿರ್ಲಕ್ಷ್ಯಸಿದರೆ ಕಂಡ ಕನಸೆಲ್ಲ ನುಚ್ಚುನೂರಾಗುತ್ತವೆ. ಆಹಾರ ಪದ್ಧತಿ ಹಾಗೂ ಶುದ್ಧ ನೀರು ಸೇವನೆಗೆ ಆದ್ಯತೆ ನೀಡಬೇಕು ಎಂದರು.

ಎನ್‌ಎಸ್‌ಎಸ್ ಶಿಬಿರದ ಯೋಜನಾಧಿಕಾರಿ ಕೆ ಶರಣಬಸವ ಹಸಮಕಲ್ ಮಾತನಾಡಿ, ಉತ್ತಮ ಆಹಾರ ಸೇವನೆಯಿಂದ ದೈಹಿಕವಾಗಿ ಸದೃಢರಾಗಿರುತ್ತವೆ. ಸಾಂಕ್ರಾಮಿಕ ರೋಗಗಳನ್ನು ಹಿಮ್ಮೆಟ್ಟಿಸುವ ರೋಗ ನಿರೋಧಕ ಶಕ್ತಿಯೂ ನಾವುಗಳು ಸೇವಿಸುವ ಆಹಾರದಲ್ಲಿರುತ್ತದೆ. ಆರೋಗ್ಯಕ್ಕೆ ಹೆಚ್ಚಿನ ಮಹತ್ವ ನೀಡಬೇಕು ಎಂದರು.

ಉಪನ್ಯಾಸಕ ವಿ.ಕನಕರಾಯ ಅಧ್ಯಕ್ಷತೆ ವಹಿಸಿ ಮತನಾಡಿದರು. ಪ್ರಾಚಾರ್ಯ ಕೆ. ಮಲ್ಲಿಕಾರ್ಜುನಗೌಡ್ರು, ಬಸವರಾಜ್ ಮೇಟಿ ಸಂಪತ್ ಕುಮಾರ್, ಜಗನ್ನಾತ, ಭಾರತಿ ಇತರರು ಇದ್ದರು.

# ಕಾನಾಮಡಗು ಗ್ರಾಮಕ್ಕೆ ಅಧಿಕಾರಿಗಳು ಭೇಟಿ

## ಮೂಲಭೂತ ಸೌಲಭ್ಯ ಕಲ್ಪಿಸಲು ಬದ್ಧ ಎಂದ ತಾಪಂ ಇಓ ನರಸಪ್ಪ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಆಲೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕಾನಾಮಡಗು ಗ್ರಾಮದ ದಲಿತ ಕಾಲೋನಿಯಲ್ಲಿ ದಿನನಿತ್ಯ ಬೇಕಾಗುವ ಕುಡಿಯುವ ನೀರಿನ ಸಮಸ್ಯೆ ಕುರಿತು ಹಂಪಿ ಟೈಮ್ಸ್ ಪತ್ರಿಕೆಯಲ್ಲಿ "ಕೂಲಿ ಕೆಲಸಕ್ಕೆ ಹೋಗ್ಬೇಕು ಸಮಯಕ್ಕೆ ಸರಿಯಾಗಿ ಕುಡಿಯುವ ನೀರು ಬಿಡ್ರಪ್ಪ" ಶೀರ್ಷಿಕೆಯಡಿ ಬುಧವಾರ ವರದಿ ಪ್ರಕಟವಾದ ಬೆನ್ನಲ್ಲೆ ಗ್ರಾಮದ ದಲಿತ ಕಾಲೋನಿಗೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ನರಸಪ್ಪ,


ಹಂಪಿ ಟೈಮ್ಸ್

ಕೂಲಿ ಕೆಲಸಕ್ಕೆ ಹೋಗ್ಬೇಕು ಸಮಯಕ್ಕೆ ಸರಿಯಾಗಿ ಕುಡಿಯುವ ನೀರು ಬಿಡ್ರಪ್ಪ

■ ಹಂಪಿ ಟೈಮ್ಸ್ ಕೂಡ್ಲಿಗಿ

26 Dec 2024 - Page 1-powerd by webgauge



ಮತ್ತು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವಿನಯ್ ಕುಮಾರ್, ಹಾಗೂ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು, ದಲಿತ ಮುಖಂಡರಾದ ಎನ್ ಫಕೀರಪ್ಪ, ದುರುಗಪ್ಪ, ಸೇರಿದಂತೆ ಗ್ರಾಮದ ಮಹಿಳೆಯರು ಆ ಸ್ಥಳಕ್ಕೆ ಗುರುವಾರ ಭೇಟಿ ಮಾಡಿ ಕುಡಿಯುವ ನೀರು ಸೇರಿದಂತೆ, ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲಿಸಿದರು. ಶೀಘ್ರ ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಕ್ರಮವಹಿಸಲಾಗುವುದು ಎಂದು ಗ್ರಾಮಸ್ಥರಿಗೆ ತಿಳಿಸಿದರು.




## ಸ್ಟುಡೆಂಟ್ ಕಾಲಂ

# ಅಂದು ಪಾಪರ್, ಇಂದು ಟಾಪರ್



ಸೋಮನಹಳ್ಳಿ ಎಂಬ ಊರಿನಲ್ಲಿ ಸಚಿನ್ ಮತ್ತು ಚಿನ್ನು ಎಂಬ ಇಬ್ಬರು ಮಕ್ಕಳಿದ್ದರು. ಸಚಿನ್ ಎಂಬ ಹುಡುಗ ಶಾಲೆಯಲ್ಲಿ ದಡ್ಡ ಇದ್ದ. ಶಾಲೆಯಲ್ಲಿ ಮಿಸ್ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತಿರಲಿಲ್ಲ. ಚಿನ್ನು ಎಂಬ ಹುಡುಗಿ ಶಾಲೆಯಲ್ಲಿ ಟಾಪರ್ ಇದ್ದಳು. ಮಿಸ್ ಏನು ಕೇಳಿದರು ಚಿನ್ನು ಎದ್ದು ಉತ್ತರ ಹೇಳುತ್ತಿದ್ದಳು. ಹೀಗೆ ಒಂದು ದಿನ ಸಚಿನ್ ಪರೀಕ್ಷೆ ಬರೆಯುವಾಗ ಕಾಫಿ ಚೀಟಿ ತಂದಿದ್ದ. ಚಿನ್ನು ಅದನ್ನು ನೋಡಿ 'ಸರ್ ಸಚಿನ್ ಕಾಫಿ ಚೀಟಿ ತಂದಿದ್ದಾನೆ' ಎಂದು ಹೇಳಿದಳು. ಸಚಿನ್ 'ಸರ್ ನಾನು ತಂದಿಲ್ಲ' ಎಂದನು. ಆಗ ಚಿನ್ನು 'ಪಾಕೆಟ್‌ನಲ್ಲಿ ಇಟ್ಟುಕೊಂಡಿದ್ದಾನೆ ಸರ್' ಎಂದಳು. ಶಿಕ್ಷಕರು ಸಚಿನ್‌ನ್ನು ತಪಾಸಣೆ ಮಾಡಿದರು. ಅವನ ಬಳಿ ಕಾಪಿ ಚೀಟಿ ಇದ್ದುದು ನಿಜವಾಗಿತ್ತು. ಅದಕ್ಕೆ ಶಿಕ್ಷಕರು ಸಚಿನ್‌ನನ್ನು ಪರೀಕ್ಷೆ ಕೋಣೆಯಿಂದ ಹೊರಗೆ ಕಳಿಸಿದರು. ಸಚಿನ್ ಇನ್ನೊಮ್ಮೆ ಹೀಗೆ ಮಾಡುವುದಿಲ್ಲ. ಪರೀಕ್ಷೆ ಬರೆಯಲು ಅವಕಾಶ ಕೊಡಿ ಎಂದು ವಿನಂತಿಸಿಕೊಂಡನು. ಆದರೆ ಶಿಕ್ಷಕರು ಪುನಃ ನೀನು ಕಾಪಿ ಬರೆದರೆ ಹೇಗೆ? ಅದಕ್ಕೆ ಈ ಪರೀಕ್ಷೆಬೇಡ ಎಂದರು. ಆಗ ಸಚಿನ್ 'ಇಲ್ಲ ಸರ್ ಕಾಪಿ ಮಾಡುವುದಿಲ್ಲ ಸರ್. ಬೇಕಿದ್ದರೆ ನನ್ನ ದೂರ ಕೂಡಿಸಿರಿ ಸರ್' ಎಂದು ಕೇಳಿಕೊಂಡನು.



'ಸರಿ ಹಾಗಾದರೆ ನಿಮ್ಮ ಅಪ್ಪ ಅಮ್ಮನಿಗೆ ಈ ವಿಷಯ ಹೇಳಿ ನಿನ್ನನ್ನು ಪರೀಕ್ಷೆಗೆ ಕೂಡಿಸುತ್ತೇನೆ. ಅವರ ಫೋನ್ ನಂಬರ್ ಕೊಡು' ಎಂದರು ಶಿಕ್ಷಕರು. ಅದಕ್ಕೆ ಸಚಿನ್ 'ಬೇಡ ಸಾರ್, ನಮ್ಮ ಅಪ್ಪ ಅಮ್ಮನಿಗೆ ಹೇಳಬೇಡಿ. ಅವರಿಗೆ ಈ ವಿಷಯ ಗೊತ್ತಾದರೆ ನನ್ನನ್ನು ಹೊಡೆಯುತ್ತಾರೆ ಸರ್' ಎಂದು ಬೇಡಿಕೊಂಡನು. ಆಗ ಶಿಕ್ಷಕರು 'ಹಾಗಾದರೆ ನಿನಗೊಂದು ಟಾಸ್ಕ್ ನೀಡುತ್ತೇನೆ. ನೀನು ದಿನಾಲು ಒಂದೊಂದು ಪಾಠದ ಪ್ರಶ್ನೋತ್ತರಗಳನ್ನು ಓದಿಕೊಂಡು ಬರಬೇಕು' ಎಂದರು.

ಅಂದಿನಿಂದ ಸಚಿನ್ ಚೆನ್ನಾಗಿ ಓದಿದನು. ಶಾಲೆಯಲ್ಲಿ ಎಲ್ಲಾ ವಿಷಯಗಳಲ್ಲೂ ಚೆನ್ನಾಗಿ ಅಭ್ಯಾಸ ಮಾಡಿದನು. ಎಂಟತ್ತು ವರ್ಷಗಳು ಕಳೆದವು. ಒಂದು ದಿನ ಒಬ್ಬ ವ್ಯಕ್ತಿಯು ಶಾಲೆಗೆ ಒಂದು ಸ್ವೀಟ್ ಬಾಕ್ಸ್ ಹಿಡಿದುಕೊಂಡು ಬಂದನು. ಆಗ ಅವನು ತನ್ನ ಗುರುಗಳ ಬಳಿ ಹೋದನು. 'ಸ್ವೀಟ್ ತಗೊಳ್ಳಿ ಸರ್!' ಎಂದನು. ಆಗ ಶಿಕ್ಷಕರು 'ನೀನು ಯಾರೂ ಅಂತ ಗೊತ್ತಾಗಲಿಲ್ಲ. ಸ್ವೀಟ್ ಏಕೆ ಕೊಡುತ್ತಿರುವೆ?' ಎಂದರು. ಆಗ ಅವನು 'ನಾನು ಸರ್ ಸಚಿನ್. ಅಂದು ಶಾಲೆಯಲ್ಲಿ ಕಾಪ ಮಾಡಿದಾಗ ಬೈದು ಬುದ್ದಿ ಹೇಳಿದ್ದಿರಿ. ನಿಮ್ಮ ಮಾತಿನಂತೆ ಚೆನ್ನಾಗಿ ಓದಿ ಓಗ ಡಾಕ್ಟರ್ ಆಗಿರುವೆ. ಅದಕ್ಕಾಗಿ ಈ ಸ್ವೀಟ್ ಸರ್' ಎಂದನು. ಆಗ ಶಿಕ್ಷಕರಿಗೆ ಪರಮಾನಂದವಾಯಿತು. ಅವನನ್ನು ಅಪ್ಪಿಕೊಂಡು ಅಭಿನಂದನೆಗಳನ್ನು ಹೇಳಿದರು. ತರಗತಿಗೆ ಕರೆದುಕೊಂಡು ಹೋಗಿ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಸಿಕೊಟ್ಟರು. ಆಗ ಸಚಿನ್ ತನ್ನ ಹಿಂದಿನ ಘಟನೆಯನ್ನು ತರಗತಿಯಲ್ಲಿ ಹಂಚಿಕೊಂಡ. ಚೆನ್ನಾಗಿ ಓದುವಂತೆ ಅಲ್ಲಿನ ವಿದ್ಯಾರ್ಥಿಗಳಿಗೆ ಬುದ್ದಿವಾದ ಹೇಳಿದ. ಒಮ್ಮೆ ಪಾಪರ್ ಆಗಿದ್ದ ಸಚಿನ್ ಇಂದು ಟಾಪರ್ ಆಗಿದ್ದ.

– ಯು. ಧನಂಜಯ. **8ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಭಯಕ್ಕೆ ಭಯಪಡಿಸಿ ನಿಶ್ಚಿಂತನಾಗಿರುವುದು...

ಇಂದಿನ ಜಗತ್ತಿನಲ್ಲಿ ಅಥವಾ ಸಮಾಜದಲ್ಲಿ ಭಯವಿಲ್ಲದ ವಾತಾವರಣ ಎಲ್ಲಿದೆ? ಯುದ್ಧಗಳ ಭಯ, ರೋಗರುಜಿನಗಳ ಭಯ, ರಸ್ತೆಯಲ್ಲಿ ಎಲ್ಮೆಟ್ ಇಲ್ಲದೇ ವಾಹನ ಚಲಿಸುವಾಗ ಪೋಲೀಸರ ಭಯ, ಲಂಚ ಸ್ವೀಕರಿಸುವಾಗ ಲೋಕಾಯುಕ್ತರ ಭಯ, ಮೇಲಿನ ಅಧಿಕಾರಿ ಕಂಡಾಗ ಕೆಳಗಿನ ಅಧಿಕಾರಿಗೆ ಭಯ, ಹುಡುಗ ಹುಡುಗಿ ಪ್ರೀತಿಸಿದಾಗ ಸಮಾಜದ ಭಯ, ಮಕ್ಕಳಿಗೆ ಪರೀಕ್ಷಾ ಭಯ, ಯುವಕರಿಗೆ ಕೆಲಸದ ಭಯ, ಸಂಸಾರಿಗಳಿಗೆ ಬದುಕು ಕಟ್ಟಿಕೊಳ್ಳುವಲ್ಲಿ ಭಯ, ಸನ್ಯಾಸಿಗಳಿಗೆ ಸಮಾಜದ ಜನರನ್ನು ತಿದ್ದುವುದು ಭಯ, ರಾಜಕಾರಣಿಗಳಿಗೆ ಜನರನ್ನು ಒಗ್ಗೂಡಿಸುವುದು ಭಯ ಹಾಗೂ ಚುನಾವಣೆಯಲ್ಲಿ ಗೆಲ್ಲುತ್ತೇನೆಯೋ! ಇಲ್ಲವೋ! ಎಂಬ ಭಯ. ವಿಚಾರ ಮಾಡದೇ ಸಾಧನೆಯಲ್ಲಿ ಮುಂದುವರೆದಾಗ ಭಯ, ತಿಳಿವಳಿಕೆಯಿಲ್ಲದೇ ಸಿಕ್ಕಿದ್ದನ್ನೆಲ್ಲಾ ತಿಂದು–ಕುಡಿದು ಆರೋಗ್ಯ ಹಾಳಾಗಿ ಅನಾರೋಗ್ಯ ಆವರಿಸಿದಾಗ ಭಯ, ಗೊತ್ತಿರದ ಕೃತ್ಯಗಳಲ್ಲಿ ತೊಡಗಿಸಿಕೊಂಡಾಗ ಭಯ, ಅರಿಯದ ಪ್ರದೇಶಕ್ಕೆ ನುಗ್ಗಿದಾಗ ತುಂಬಾ ಭಯ. ಜೀವನದಲ್ಲಿ ಒಬ್ಬೊಬ್ಬರಿಗೆ ಒಂದು ರೀತಿಯ ಭಯವಿದ್ದೇ ಇರುತ್ತದೆ. ಹೀಗೆ ಲೌಕಿಕ ಪ್ರಪಂಚವು ಭಯ ಪ್ರಪಂಚದ ಆಗರವಾಗಿದೆ. ಆದರೂ ಎಲ್ಲದಕ್ಕೂ ಕಾರಣ ಮುಖ್ಯವಾಗಿ ನಮ್ಮ ಅಜ್ಞಾನವೇ ಭಯಕ್ಕೆ ಮೂಲ.

ನಾವು ಮಾಡುವ ಕೆಲಸಕಾರ್ಯಗಳು ಸತ್ಯ, ಪ್ರಾಮಾಣಿಕತೆ ಮತ್ತು ನಿರ್ಮಲವಾಗಿದ್ದರೆ ಯಾರಿಗೂ ಹೆದರುವ ಅವಶ್ಯಕತೆಯಿಲ್ಲ. ಕೆಲವೊಮ್ಮೆ ನಮ್ಮ ನೆರಳೇ ನಮಗೆ ಭಯ ತರಿಸಬಲ್ಲದು. ಸಹಜವಾಗಿ ಕತ್ತಲಿನಲ್ಲಿ ಹಗ್ಗವನ್ನೇ ಹಾವೆಂದು ಭಾವಿಸಿ ಭಯಪಡುವುದಿದೆ. ಆಗ ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡಿದಾಗ ಭಯ ಮಾಯವಾಗುವುದು. ಆದರೂ ಎಚ್ಚರಿಕೆ ಬಹಳ ಮುಖ್ಯ. ಜೀವನದುದ್ದಕ್ಕೂ ಅವರು ಏನೆಂದು ಕೊಳ್ಳುವರೋ ಇವರು ಏನೆಂದುಕೊಳ್ಳುವರೋ ವೃಥಾ ಯೋಚನೆ ಮಾಡಿ ಭಯಪಡುವುದು ಸಲ್ಲದು. ಇಲಿ ಹೋಯಿತೆಂದರೆ ಹುಲಿಯೇ ಹೋಯಿತೆಂದು ಭಯ ತರಿಸುವವರು ನಮ್ಮ ನಡುವೆ ಇದ್ದಾರೆ. ಜಗತ್ತಿನಲ್ಲಿ ನಾವು ಸ್ವಲ್ಪ ಎಡವಿದರೆ ಅಥವಾ ಬಿದ್ದರೆ ಎತ್ತುವವರಿಗಿಂತ ನಗುವವರೇ ಹೆಚ್ಚು. ಇದಕ್ಕೆಲ್ಲಾ ತಲೆ ಕೆಡಿಸಿಕೊಂಡು ಭಯಗೊಳ್ಳಬೇಕಿಲ್ಲ. ನಾವು ತುಳಿಯುವ ಪ್ರತಿಯೊಂದು ಹೆಜ್ಜೆಗಳಲ್ಲಿ ಜಾಗೂರುಕತೆ ಮತ್ತು ಸ್ಪಷ್ಟತೆ ಇದ್ದಾಗ ಭಯ ತನ್ನಿಂದ ತಾನೇ ಮಾಯವಾಗುವುದು.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಒಮ್ಮೆ ವಿವೇಕಾನಂದರು ವಾಯುವಿಹಾರದಲ್ಲಿದ್ದಾಗ ಒಂದೆರೆಡು ಕೋತಿಗಳು ಅವರ ಬೆನ್ನು ಹತ್ತಿದವು. ಅವರು ತಿರುಗಿ ನೋಡಿ ಸ್ವಲ್ಪ ಜೋರಾಗಿ ನಡೆಯಲಾ ರಂಭಿಸಿದರು. ಆಗ ಅವು ಕೂಡ ಜೋರಾಗಿ ಅವರ ಬೆನ್ನು ಹತ್ತಿದವು. ಅವರು ಓಡುವುದಕ್ಕೆ ಪ್ರಾರಂಭಿಸಿದಾಗ ಅವು ಸಹ ಓಡಲಾರಂಭಿಸಿದವು. ಅವರು ನಿಂತಾಗ ಅವುಗಳು ನಿಂತು ಬಿಟ್ಟವು. ಅವರು ತಕ್ಷಣ ಒಂದು ನಿರ್ಧಾರ ಮಾಡಿ ಒಮ್ಮೆಲೆ ಹಿಂತಿರುಗಿ ಗಟ್ಟಿಯಾಗಿ ಕೈಯೆತ್ತಿ ನಿಂತು ಬಿಟ್ಟರು. ಆಗ ಕೋತಿಗಳು



ದಿಕ್ಕೆಟ್ಟು ಓಡಲಾರಂಬಿಸಿದವು. ಅಂದರೆ ಭಯದಿಂದ ಎಷ್ಟು ದೂರ ಓಡಿ ತಪ್ಪಿಸಿಕೊಳ್ಳುತ್ತೇವೆ ಎನ್ನುವುದಕ್ಕಿಂತ ಎಷ್ಟು ಬೇಗ ಭಯಕ್ಕೆ ಭಯ ತರಿಸಿ ಪಾರಾಗುತ್ತೇವೆ ಎಂಬುದು ಮುಖ್ಯ. ಈ ಸಂದರ್ಭದಲ್ಲಿ ಅಲ್ಲಮಪ್ರಭುವಿನ ವಚನವೊಂದು ಹೀಗಿದೆ:

**ಕಳ್ಳಗಂಜಿ ಕಾಡ ಹೊಕ್ಕಡೆ ಹುಲಿ ತಿನ್ನದೆ ಮಾಬುದೆ?**
**ಹುಲಿಗಂಜಿ ಹುತ್ತವ ಹೊಕ್ಕಡೆ ಸರ್ಪ ತಿನ್ನದೆ ಮಾಬುದೆ?**
**ಕಾಲಗಂಜಿ ಭಕ್ತನಾದಡೆ ಕರ್ಮ ತಿನ್ನದೆ ಮಾಬುದೆ?**
**ಇಂತೀ ಮೃತ್ಯುವಿನ ಬಾಯ ತುತ್ತಾದ**
**ವೇಷಡಂಬಕರನೇನೆಂಬೆ ಗುಹೇಶ್ವರ?**

ಭಯದಿಂದ ಮತ ಪರಿವರ್ತನೆಗೊಳ್ಳುವ ಪ್ರಕ್ರಿಯೆ ಇಲ್ಲಿ ಕಾಣಬರುತ್ತಿದೆ. ಕಳ್ಳರಿಗೆ ಅಂಜಿ ಕಾಡಿಗೆ ಹೋದರೆ ಹುಲಿ ತಿನ್ನದೇ ಬಿಡುವುದೆ? ಹುಲಿಗಂಜಿ ತಕ್ಷಣ ಹುತ್ತದಲ್ಲಿ ಅವಿತುಕೊಂಡರೆ ಹಾವು ಕಚ್ಚದಿರುವುದೆ? ನಾಳೆ ಏನಾಗುವುದೋ ಎಂದು ಕಾಲಕ್ಕಂಜಿ ಭಕ್ತನಾದರೆ ಹಿಂದಿನ ಕರ್ಮಗಳು ಬೆನ್ನ ಬಿಡುವವೆ? ಆದ್ದರಿಂದ ಭಯಕ್ಕೆ ಭಯಪಡಿಸಿ ನಿಶ್ಚಿಂತನಾಗಿರುವುದೇ ಒಳಿತು. ಭಯಂಕರ ಪರಿಸರದಲ್ಲೂ ಬುದ್ಧಿ ಕಳೆದುಕೊಳ್ಳಬಾರದು. ಎಲ್ಲಾ ಕಾಲಕ್ಕೂ ನಿರ್ಭಯವಾಗಿ ಕಾಲ ಕಳೆಯಬೇಕಷ್ಟೆ. ಹೀಗೆ ಬಾಳಲರಿಯದವರನ್ನು ಅಲ್ಲಮ ಧಿಕ್ಕಾರವೆಂದಿದ್ದಾನೆ.ಸಮಸ್ಯೆಗಳಿಗೆ ಹೆದರಿ ಓಡುವುದಕ್ಕಿಂತ ಪರಿಹಾರ ಹೇಗೆ ಹುಡುಕುತ್ತೇವೆಯೋ ಹಾಗೆಯೆ ಭಯದಿಂದ ಬಾಳುವುದಕ್ಕಿಂತ ಅದರ ಮೂಲ ಕೆದಕಿ ಬೇರು ಸಹಿತ ಕಿತ್ತು ಹಾಕುವ ಪ್ರಯತ್ನ ನಮ್ಮದಾಗಬೇಕು. ಒಟ್ಟಾರೆ ದೇವರಲ್ಲಿ ಭಕ್ತಿ ಮತ್ತು ಧರ್ಮದಿಂದ ನಡೆದಾಗ ಯಾವ ಭಯವೂ ಇರಲಾರದು.

ಕೆಲವೊಮ್ಮ ಯಾಕೆ ನಮಗೆ ಮರಣದ ಭಯ ಉಂಟಾಗುತ್ತದೆ? ಮತ್ತು ಬೇರೆಯವರು ಮರಣಿಸಿ ದಾಗಲೂ ದುಃಖ ದೊಂದಿಗೆ ಭಯವಾಗುತ್ತದೆ. ಕಾರಣ ಅವರ ಮೇಲಿನ ಅತಿಯಾದ ಪ್ರೀತಿ–ಅಭಿಮಾನವಿರುವುದರಿಂದ. ಅವರನ್ನು ಕಳೆದುಕೊಂಡಾಗ ಅವರ ಬೆಲೆ ಗೊತ್ತಾಗಿ ಪರಿತಪಿಸುತ್ತೇವೆ. ಅಂದರೆ ಯಾವುದೇ ವಸ್ತು ಅಥವಾ ವ್ಯಕ್ತಿಯಲ್ಲಿ ಆಸೆ, ಆಮಿಷ, ಆಕರ್ಷಣೆ, ಪ್ರೀತಿ, ವ್ಯಾಮೋಹ ಹೆಚ್ಚಾದಾಗ. ಬಣ್ಣ ಬಣ್ಣದ ಲೌಕಿಕ ಪ್ರಪಂಚ ಬಿಡಲು ಮನಸ್ಸಾಗದೇ ಸಣ್ಣಗೆ ಭಯ ಶುರುವಾಗುತ್ತದೆ. ಇದಕ್ಕೆ ಉಪಾಯವೆಂದರೆ ಒಂದು ಬಾರಿ ಮನಸ್ಸನ್ನು ಗಟ್ಟಿಯಾಗಿಸಿ ಅಭಿಮಾನ, ವ್ಯಾಮೋಹ ಬಿಟ್ಟರೆ, ನಂತರ ನಾವೂ ಮರಣಕ್ಕೂ ಭಯ ಪಡುವುದಿಲ್ಲ.

# ಜೀವನ ಬರಿ ಹೊಂದಾಣಿಕೆಯಲ್ಲ ಬಿಡಿಸಲಾಗದ ಪವಿತ್ರ ಬಂಧ

ಜೀವನ ಎಂದರೆ ಹೊಂದಾಣಿಕೆ, ಹೊಂದಾಣಿಕೆಯೇ ಜೀವನ ಎಂಬುದು ಸಾಮಾನ್ಯವಾಗಿ ಎಲ್ಲರೂ ಒಪ್ಪಿತ ಅಂಶವಾಗಿದೆ. ಇಲ್ಲಿ ಯಾರೊಬ್ಬರ ಜೀವನವೂ ಹೂವಿನ ಹಾಸಿಗೆಯಂತಿಲ್ಲ, ಆಗಿದ್ದರೆ ಅಂತಹ ಜೀವನಕ್ಕೆ ಕವಡೆಕಾಸಿನ ಕಿಮ್ಮತ್ತು ಇರುತ್ತಿರಲಿಲ್ಲ, ಬದುಕಿನ ಹಾದಿಯುದ್ದಕ್ಕೂ ಕಲ್ಲು–ಮುಳ್ಳುಗಳು ಎಡತಾಕುತ್ತಿರುತ್ತವೆ, ಸುಖ–ದುಃಖಗಳು ಸಮ್ಮಿಳಿತವಾಗಿರುತ್ತವೆ, "ಜೀವನ ಅಂದರೆ ಕೆಲವೊಬ್ಬರಿಗೆ ಕೊಬ್ಬರಿ ಮಿಠಾಯಿ ಇಲ್ಲವೇ ಕಲ್ಲುಸಕ್ಕರೆ ಇದ್ದಹಾಗೆ ಯಾವತ್ತೂ ಸವಿಸವಿ, ಇನ್ನೆಲವರಿಗೆ ಅಗೆದು ಅಗೆದು ದವಡೆ ನೋವು ತರಿಸುವಂತಹ ಚೂಯಿಂಗ್ ಗಮ್ ತರಹ ತೀರಾ ಸಪ್ಪೆಸಪ್ಪೇ, ಇತ್ತ ಉಗಿಯೋಕು ಆಗದೆ ಅತ್ತ ನುಂಗೋಕೆ ಆಗದೆ ಇಬ್ಬದಿತನದಿ ಸಿಲುಕಿರುತ್ತಾರೆ..!" ಶ್ರೀಮಂತಿಕೆ ಇದ್ದಕೂಡಲೇ ಸುಖದಿಂದ್ದಾರೆ ಎಂದು ತಿಳಿಯುವುದು ಶುದ್ಧ ಮೂರ್ಖತನವಾದೀತು! ದೀಪದಡಿ ಕತ್ತಲು ಎನ್ನುವ ಹಾಗೆ ಅವರೂ ಕೂಡ ನೆಮ್ಮದಿಯನ್ನು ಅರಸುತ್ತಾ ಅಂಡಲೆಯುತ್ತಾರೆ.

ಬದುಕಿನ ಕುರಿತಾಗಿ ಅನೇಕರು ತಮ್ಮತಮ್ಮದೇ ಆದ ಅರಿವಿನ ನೆಲೆಯಲ್ಲಿ ವ್ಯಾಖ್ಯಾನಿಸುತ್ತಾ ಬಂದಿರುವುದನ್ನು ಕಾಣಬಹುದಾಗಿದೆ. ಹೀಗೆ ಬಂದು ಹಾಗೇ ಹೋಗುವ ಬದುಕಿಗೆ ನಿಜಕ್ಕೂ ಒಂದು ಅರ್ಥ ಇದೆಯಾ? ನೆನ್ನೆಯ ಕೊರಗಿನಲಿ, ನಾಳೆಯ ಚಿಂತೆಯಲಿ ಇಂದನ್ನು ಬಲಿಗೊಡುತ್ತ ಇಡೀ ಜೀವನ ಅಸಂತುಷ್ಟಿಯಿಂದ ಬದುಕಿ–ಬಾಳಿ ಸತ್ತಮೇಲೆ ಸಿಗುವ ನಿರಾಳ ಭಾವಕ್ಕೆ ಮುಕ್ತಿ ಎನ್ನಬಹುದೇ? ನಾನು ನನ್ನದು ಎಂದು ಬಡಿದಾಡುತ್ತಾ.., ಎಂಜಲು ಗೈಯಲ್ಲಿ ಕಾಗೆಯನ್ನೂ ಓಡಿಸದ ಲೋಭಿತನಕ್ಕೆ ಸಿಲುಕಿ, ಕೊನೆಗೊಂದು ದಿನ ಎಲ್ಲವನ್ನು ಬಿಟ್ಟು ಹೊರಟಾಗ, ಇದ್ದಾಗಂತೂ ತಾನೂ ನೆಮ್ಮದಿ ಕಾಣಲಿಲ್ಲ, ಇನ್ನೊಬ್ಬರನ್ನೂ ನೆಮ್ಮದಿಯಿಂದ ನಿದ್ದೆಮಾಡೋಕೆ ಬಿಡಲಿಲ್ಲ, ಎಂದು ಹಿಡಿಶಾಪಹಾಕುತ್ತಾ.., ಎಲ್ಲರೂ ಆತ್ಮಕ್ಕೆ ಶಾಂತಿ [ರೆಸ್ಟ್ ಇನ್ ಪೀಸ್] ಕೋರುವುದು!



ಡಾ ಯಲ್ಲಮ್ಮ ಕೆ.
ಮಲಪನಗುಡಿ ಹೊಸಪೇಟೆ

Scan For Digital Colourful
HAMPI TIMES E-paper

ಆಡಿಸುವಾತ ಬೇಸರ ಮೂಡಿ ಆಟ ಮುಗಿಸಿ ಮಣ್ಣಾಗಿಸುವ ಮುನ್ನವೇ ಮಣ್ಣಾದವರನ್ನು ನಾವು ಹೆಚ್ಚಾಗಿ ಕಾಣುತ್ತೇವೆ, ಅವನ ಹಣೆಬರ ಅಷ್ಟಿತ್ತು ಅಂತ ಕಾಣಿಸುತ್ತೆ, ಅವನ ಅನ್ನದ ಋಣ ತೀರಿತು, ದೇವರಿಗೆ ತುಂಬಾ ಪ್ರೀತಿ ಇತ್ತಂತೆ ಕಾಣಿಸುತ್ತೆ ಅದಕ್ಕೆ ಬಹುಬೇಗನೇ ತನ್ನೆಡೆಗೆ ಕರೆದುಕೊಂಡುಬಿಟ್ಟ, ಏನೆಲ್ಲ ಸಾಂತ್ವಾನ ಮಾತುಗಳನ್ನು ಆಡುತ್ತೇವೆ ; ದೇವರು ನಮ್ಮ ಮನೆ ಮುರಿದುಬಿಟ್ಟಾ, ದೀಪಕ್ಕೆ ದಿಕ್ಕಲ್ಲದಂತೆ ಮಾಡಿಬಿಟ್ಟಾ, ಎಂತೆಂತವು ಇನ್ನೂ ಗುಡ್ಡ ಕುಂತಂಗೆ ಕುಂತವೆ ಅವಕ್ಕೆ ಏನೂ ಬರವಲ್ತು ಹೊತಗೊಂಡು ಹೋಗುವಂತದ್ದು, ನನ್ನ ಮಗನೇ ಬೇಕಿತ್ತಾ? ನನ್ನ ಗಂಡಾನೇ ಬೇಕಿತ್ತಾ? ಎಂದೆಲ್ಲಾ ದೇವರನ್ನು ಹಳಿಯುವುದನ್ನು ಕಾಣುತ್ತೇವೆ ; ಮುಂದುವರೆದು ಏನಾಗಿತ್ತು ಅಂದರೆ? ಏನಾಗಿತ್ತು? ಏನು ಆಗಬಾರದಿತ್ತೋ ಅದೆಲ್ಲಾ ಆಗಿತ್ತು! ಡಾಕ್ಟರು ಏನಂತ ಹೆಸರಿಟ್ಟುರು? ಅವರಿಗೆನು ಆರಾಮಿಲ್ಲ ಅಂತ ಹೋದ್ರೆ ಸಾಕು ನೂರು ಹೆಸರಿಟ್ಟು, ಲಕ್ಷಗಟ್ಟಲೇ ಪೀಕ್ತಾರೆ! ಒಟ್ಟನಲ್ಲಿ ದೇವರು ತನ್ನ ಮೇಲೆ ಏನೂ ಹಾಕೊಳ್ಳಲ್ಲ ನೋಡು! ಕುಂತಕುಂತಲ್ಲೇ, ಮಕ್ಕಂಡಲ್ಲೇ ತಣ್ಣಗೆ ಹೋದರು ಆಟಾಟ್ಯಾಕ್ ಅಂತಾರೆ, ಜಡ್ಡು–ಜಾಪತ್ರೆ ಬಂದ್ರೆ ದೊಡ್ಡಬ್ಯಾನಿಗೆಲ್ಲ ಬಗೆಬಗೆ ಹೆಸರಿಡ್ತಾರೆ, ನಮ್ಮ ಕಾಲದಲ್ಲಿ ಇಂಗ ಇರಲಿಲ್ಲ ಅನ್ನು.., ಎಂದು ಬೇಸರಿಸಿ ನುಡಿಯುವದನ್ನು ಕಾಣುತ್ತೇವೆ.

ಪ್ರಸ್ತುತ ದಿನಮಾನಗಳಲ್ಲಿ ಅಪಘಾತ, ಅನಾರೋಗ್ಯ, ಪ್ರಕೃತಿ ವಿಕೋಪದಂತಹ ಸನ್ನಿವೇಶಗಳಲ್ಲಿ ಅಕಾಲಿಕ ಮರಣಕ್ಕೆ ತುತ್ತಾಗುವವರ ಸಂಖ್ಯೆ ಹೆಚ್ಚುತ್ತಿದೆ. ಜನನದರ ಹೆಚ್ಚಿ, ಮರಣದರ ಕಮ್ಮಿಯಾದರೆ ಅದು ಜನಸಂಖ್ಯಾ ಸ್ಫೋಟದಂತಹ ಸಾಮಾಜಿಕ ಪಿಡುಗಿಗೆ ನಾಂದಿಹಾಡಿತೆನ್ನಬಹುದು! ಹಾಗಾದರೆ ದೇವರು ಎಲ್ಲರನ್ನೂ ಒಂದಲ್ಲ ಒಂದು ನೆಪ ಒಡ್ಡಿ ಕೊಂಡೊಯ್ಯುವನಾದರೆ, ಆ ನೆಪಗಳು ನಿಮಿತ್ತ ಮಾತ್ರವೇ? ಅವನು ಆಡಿಸಿದಂತೆ ಆಡುವ ಗೊಂಬೆಗಳೇ ನಾವುಗಳೆಲ್ಲ? ಸಾವಿನ ಕುರಿತಾಗಿ ನಮ್ಮಲ್ಲಿ ಸ್ವಯಂಕೃತ ಅಪರಾಧಗಳೇನು ಇಲ್ಲವೇ? ಹೀಗೆ ಸುಖಾಸುಮ್ಮನೆ ದೇವರನ್ನು ಹಳಿಯುವುದೇಕೆ? ಈ ಬಗೆಗೆ ನಾವು ಸ್ವಲ್ಪ ಯೋಚಿಸಬೇಕಲ್ಲವೇ? ಹೀಗೆ ಯೋಚನಾ–ಚಿಂತನಾ ಲಹರಿ ಎತ್ತೆತ್ತಲೋ ಸಾಗಿ ತಳಬುಡವಿಲ್ಲದ, ಆದಿ–ಅಂತ್ಯವಿಲ್ಲದೆ, ಗೊತ್ತು–ಗುರಿಯಿಲ್ಲದೆ ಸಾಗುವ ಬದುಕಿನ ಪಯಣದ ಕುರಿತಾಗಿ ಕಟ್ಟಿದ ಅಂಕಣ ಬರಹವಾಗಿದೆ.

ಮುದ್ದು ಮಗಳಿಗೆ ಮದುವೆಮಾಡಿ ಗಂಡನಮನೆಗೆ ಕಳುಹಿಸುವ ಮುನ್ನ ಹೊಸಮನೆ, ಹೊಸಜಾಗ ಹ್ಯಾಗೋ ಏನೋ ಎಂದು ಕಳವಳಿಸುವ ಮಗಳಿಗೆ ಅತ್ತೆ–ಮಾವ, ಮೈದುನ–ನೆಗಣ್ಣಿಯರೊಂದಿಗೆ ಹೊಂದಿಕೊಂಡು ಹೋಗು ಎಂದು ಬೋಧೆ ಮಾಡಲಾಗುತ್ತೆ ; ಗಂಡ–ಅತ್ತೆ–ಮಾವಂದಿರೊಂದಿಗೆ ಜಗಳವಾಡಿಕೊಂಡು ತೌರಿಗೆ ಬಂದ ಮಗಳಿಗೆ ಗಂಡ ಹೇಗೇ ಇರಲಿ? ಸಂಸಾರ ಅಂದ್ಮೇಲೆ ಒಂದಲ್ಲ ಹತ್ತುಮಾತು ಬರುತ್ತೆ ಹೋಗುತ್ತೆ ಅದಕ್ಕೆಲ್ಲ ಅಂಜಿದರೆ ಬಾಳ್ವೆ ಆಗ್ತದಾ? ಹುಚ್ಚಿ ಹೊಂದಿಕೊಂಡು ಹೋಗೋದು ಕಲಿ ಮೊದಲು ಎಂದು ಮರುಬೋಧನೆ ಇಲ್ಲವೇ ಗಂಡ–ಹೆಂಡತಿ ಚೆಂದಾಗಿ ಬಾಳ್ವೆ ಮಾಡಿಕೊಂಡು ಹೊಗುವಂಗೆ, ಅತ್ತೆ–ಮಾತ ಉಸಿರೆತ್ತದಂಗೆ ಅಂತ್ರ, ಮಂತ್ರ, ಯಂತ್ರಗಳಹ ತಂತ್ರಗಳಾದಿಯಾಗಿ ಪರಿಹಾರ ಬೋಧನೆಯನ್ನು ನೀಡಲಾಗುತ್ತದೆ, ಇದಕ್ಕೂ ಸರಿಹೋಗದಿದ್ದರೆ ಏನೋ ಕೆಟ್ಟ ಗ್ರಾಚಾರ ಬಡಿದಿರಬೇಕು, ತೌರಮನೆಯಲ್ಲಿದ್ದುಕೊಂಡು ಇಪ್ಪತ್ತೊಂದು ವಾರಮಾಡು, ಗಂಡಾದವನು ಬೇಕಾದರೆ ಬಂದೋಗೋದು ಮಾಡ್ಲಿ ಬೇಕಾದರೆ ಅಡ್ಡಿಯಿಲ್ಲ ಎಲ್ಲ ಸರಿಹೋಗುತ್ತೆ! ಮಗಳ್ನ ಬಾಳ ಮುದ್ದು ಮಾಡಿ ಬೆಳಿಸಿರೀ ಅಂತ ಕಾಣಿಸುತ್ತೆ! ಹೊಂದಿಕೊಂಡು ಹೋದ್ರೆ ಬಾಳ್ವೆ ಆಕತೀ, ಕಡ್ಡಿನ ಹೋಗಿ ಗುಡ್ಡ ಮಾಡ್ಬಾರದ್ದು ಅಂತ ನಿಮ್ಮ ಮಗಳಿಗೆ ಬುದ್ಧಿ ಹೇಳಿರಿ ಸ್ವಲ್ಪ ಅಂತ ಹಡದ್ತಪ್ಪಿಗೆ ಯಾರು ಯಾರಿಂದಲೋ ಬುದ್ಧಿಮಾತು ಕೇಳಬೇಕಾಗ್ತೆತಿ. ಇದು ಒಬ್ಬರ ಮನೆಯ ಪಾಡಲ್ಲ, ಎಲ್ಲರ ಮನೆ ದೋಸೆನೂ ಅಂತಾರಲ್ಲಾ ಹಾಗೆ ಎಲ್ಲರದ್ದೂ ಅದೇ ರಾಗ, ಅದೇ ಹಾಡು ಹಾಡು ಗೆಳತಿ! ಈ ಹಾಡು–ಪಾಡು ತಪ್ಪಿದ್ದಲ್ಲ.

ಅನಾದಿಕಾಲದಿಂದಲೂ ನಮಗೆ ಹೀಗೆ ಬೋಧಿಸಿಕೊಂಡು ಬರಲಾಗಿದೆ, ನಾವು ಹಾಗೆ ಅಂದುಕೊಂಡು ಅದನ್ನೇ ರಾಗಬದ್ಧವಾಗಿ ಹಾಡಿಕೊಂಡು ಸಾಗುತ್ತಿದ್ದೇವೆಯೇ ಹೊರತು, ಮತ್ತೊಂದು ಬಗೆಯಲ್ಲಿ ಯೋಚಿಸುವ ಗೊಡವೆ ಬೇಕಿಲ್ಲ ನಮಗೆ! ಹೊಂದಿಕೊಂಡು ಹೋಗೋದು ಅಂದ್ರೆ ಏನು? ಎಲ್ಲಿವರಗೆ ಹೊಂದಿಕೊಳ್ಳುವುದು? ಅದಕ್ಕು ಒಂದು ಇತಿ–ಮಿತಿ ಬೇಡ್ವೇ? ಸರಿ.., ಸರಿ.., ಅಂದ್ರೆ ಎಲ್ಲಿವರೆಗೂ ಸರಿತಾರೆ ಹೇಳು? ಗೋಡೆ ಬರೋವರೆಗೂ ; ಆ ಮೇಲೆ ತಿರುಗಿ ಬೀಳೋದು ಅನಿವಾರ್ಯ ಆಗ್ಲೇ ಕದನ ಶುರುವಿಟ್ಟುಕೊಳ್ಳುತ್ತದೆ, ಮನೆ ಮತ್ತು ಮನಸ್ಸು ಒಡೆದು ಕೌಟುಂಬಿಕ ವಿಘಟನೆಗೊಳ್ಳುತ್ತದೆ.

ಜೀವನ ಎಂದರೆ ಹೊಂದಾಣಿಕೆಯಲ್ಲ ಅದೊಂದು ಬಿಡಿಸಲಾಗದ ಪವಿತ್ರ ಬಂಧ ["life is not a adjustment it is a attachment or Life is not a compromise, it is an unbreakable sacred bond"] ವಾಗಿದೆ. ಹೊಂದಾಣಿಕೆ ಒಂದು ಹಂತದವರೆಗೂ ಮಾತ್ರ ಸಹ್ಯವೆನಿಸುತ್ತದೆ, ನನ್ನೀ ಮಾತಿಗೆ ಪೂರಕವಾದ ಸರಳ ನಿದರ್ಶನವನ್ನು ನೀಡುತ್ತಾ ಮುಂದುವರೆಯುತ್ತೇನೆ ; ನೀವು ಬಸ್ ನಲ್ಲಿ ಓಡಾಡುವಾಗ ಸಾಮಾನ್ಯವಾಗಿ ಈ ಸಂಗತಿ ನಿಮ್ಮ ಗಮನಕ್ಕೆ ಬಂದಿರುತ್ತದೆ ಎಂದು ನಾನು ಭಾವಿಸುತ್ತೇನೆ, ಶಾಲಾ–ಕಾಲೇಜಿನ ವಿದ್ಯಾರ್ಥಿ/ನಿಯರು ಪ್ರಯಾಣದ ಸಂದರ್ಭದಿ ತಮ್ಮ ಆಪ್ತ ಗೆಳೆಯ/ತಿಯರು ಬಂದಾಗ ಇರುವ ತಾವು ಕೂತ ಸೀಟ್ ನಲ್ಲಿ ಸ್ವಲ್ಪ ಅಡ್ಜಸ್ಟ್ ಮಾಡಿಕೊಂಡು ಇಬ್ಬರು ಕೂಡುವಲ್ಲಿ ಮೂವರು, ಮೂವರು ಕೂಡುವಲ್ಲಿ ನಾಲ್ವರು ಕೂತು ಪ್ರಯಾಣಿಸುತ್ತಾರೆ ಇದು ಹೊಂದಾಣಿಕೆಯ ಸ್ವಭಾವವನ್ನು ಎತ್ತಿತೋರಿಸುತ್ತದೆ ; ಅದೇ ಸಮಯಕ್ಕೆ ಮತ್ತೊಬ್ಬ ಗೆಳೆಯ/ತಿ ಬಂದರೆ ಅಡ್ಜಸ್ಟ್ ಆಗದು, ಸೀಟ್ ಬಿಟ್ಟುಕೊಡಲು ಮನಸ್ಸು ಒಪ್ಪದು; ಅದೇ ಆ ತಮ್ಮ ಸಂಬಂಧಿ, ದೂರದ ನೆಂಟರು, ಊರಿನ ಗುರು–ಹಿರಿಯರು ಬಂದರೆ, ಪಕ್ಕದಿ ಕುಳಿತ ಗೆಳೆಯ/ತಿಗೆ ಹೇಳಿ ನಮ್ಮ ಬಂಧುಗಳು, ಗುರುಗಳು, ನೆಂಟರು ಇವರು ಎಂದ್ಹೇಳಿ ಇಬ್ಬರೂ ಎದ್ದು ನಿಂತು ಅವರಿಗೆ ಸೀಟ್ ಬಿಟ್ಟುಕೊಳ್ಳುತ್ತಾರೆ ಎಂದುಕೊಳ್ಳಿ, ಪರವಾಗಿಲ್ಲ ನೀವು ಕೂಡಿ ಅಂದರೆ ಇಲ್ಲ ಇಲ್ಲ ನೀವು ಕೂಡಿ ಎಂದು ತಾವು ಎದ್ದು ನಿಂತು ಅವರನ್ನು ಕೂಡಿಸುತ್ತಾರೆ, ಇಲ್ಲಿ ಕೆಲಸ ಮಾಡಿದ್ದು ಹೊಂದಾಣಿಕೆ ಅಲ್ಲ ಅದು ಪ್ರೀತಿ–ವಿಶ್ವಾಸದ ಬಂಧವಾಗಿದೆ.

ಗಂಡ–ಹೆಂಡತಿ ದೂರಾಗಬಹುದು, ತಂದೆ–ತಾಯಿಯರನ್ನು ಮಕ್ಕಳು ದೂರಮಾಡಬಹುದು ಅವರಲ್ಲಿ ಹೊಂದಾಣಿಕೆಯ ಕೊರತೆಯಿದೆ, ತಂದೆ–ತಾಯಿ ಮಕ್ಕಳನ್ನು ಯಾವತ್ತೂ ದೂರಮಾಡಲಾರರು, ದೂರ ಮಾಡಿದ್ದು ಇತಿಹಾಸದಲ್ಲಿ ಇದುವರೆಗೂ ದಾಖಲಾಗಿಲ್ಲ ; ಯಾಕಂದರೆ ಅವರಲ್ಲಿ ಹೊಂದಾಣಿಕೆಯ ಜೊತೆಗೆ ಬಿಡಿಸಲಾಗದ ನಂಟಿದೆ, ಮಮತೆ ವಾತ್ಸಲ್ಯದ ಬಂಧವಿದೆ. "life is not a adjustment it is a attachment or Life is not a compromise, it is an unbreakable sacred bond based on love and affection"

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಹಳೆ ನೆನಪು ಹೊಸ ಹುರುಪು

ಹೊಸ ವರ್ಷದ ಆಗಮನಕ್ಕೆ ರೆಡಿ
ಹಳೆ ವರ್ಷಕ್ಕೆ ಮಾಡಿದೆವು ರಾಡಿ
ಗಬ್ಬೆದ್ದು ನಾರುತ್ತಿದೆ ಸಮಾಜ
ಮಾಡುತಿಹೇವು ಇದರಲ್ಲಿ ಮಜ।

ನಿತ್ಯ ನೋಡುತಿಹೇವು ಅರಚಾಟ
ಆಡುತಿಹರು ನಾಯಕರು ಚೆಲ್ಲಾಟ
ಪ್ರಜರಾಗಿಹರು ಮೂಖ ಪ್ರೇಕ್ಷಕರು
ಅಂಜಿಕೆ ಅಳುಕಿಲ್ಲದ ನಾಯಕರು।

ಕಾಯಕವೇ ಕೈಲಾಸವೆಂದರು
ಬಸವಣ್ಣನವರು
ಕಾಯಕವೇ ಮಾಡದೇ ಬರಲಿ ಎನ್ನುವರು
ಈಗಿನವರು
ಬೆವರು ಹನಿ ಬರೆದಿರೆ ಬರುವುದು ರೋಗ
ಬದುಕಿನ ಬಂಡಿ ಏಳೆಯದೇ
ಹೋಗುವೆನು ಬೇಗ।

ಸ್ವಾಭಿಮಾನ ನಮ್ಮಲಿ ಮಾಯವಾಗಿದೆ
ಸಿಕ್ಕಷ್ಟು ಪುಕ್ಕಟೆ ಬಾಚುವ ಗುಣ ಬರುತಿದೆ
ಶ್ರಮ ಪಡದೆ ಸುಖಿಸುವ ಭಾವ ಬಂದಿದೆ
ಆತ್ಮ ಸ್ಥೈರ್ಯ ನಮ್ಮ ನಮ್ಮಲಿ ಇಲ್ಲವಾಗಿದೆ।

ಹಳೆ ವರ್ಷ ಬಿಳ್ಕೊಡಕೊಡಲು
ತಯ್ಯಾರಿದ್ದೇವೆ
ಹೊಸ ವರ್ಷ ಬರಮಾಡಿಕೊಳ್ಳಲು
ಕಾತರದಲ್ಲಿದ್ದೇವೆ
ಹೊಸ ವರ್ಷದ ದಿನ ಸಂಭ್ರಮಾಚರಣೆ
ಮಾಡುತ್ತೇವೆ
ಮತ್ತೇ ಹಳೆ ವರ್ಷದ ಹಾದಿಗೆ ಜಾರುತ್ತೇವೆ.

**– ಚಂದ್ರಶೇಖರಯ್ಯ ರೋಣದಮಠ.**

### ಮಂಜಿನ ತೇರು

ಹೊರಟಿದೆ ಮಂಜಿನ ಮಾಲೆಯ ದಿಬ್ಬಣ
ಹಾಸಿದೆ ಹಸಿರ ಸಿರಿಯ ತೋರಣ
ಬಗೆ ಬಗೆ ರಂಗನು ಚೆಲ್ಲಿದೆ ಮೂಡಣ
ಇಳೆಯ ಸೊಬಗಿಗೆ ನೇಸರನೇ ಕಾರಣ

ಇಳೆಯ ಶೃಂಗರಿಸಿದೆ ಮಂಜಿನ ತೇರು
ಪೋಣಿಸಿದಂತೆ ಕಾಣುವುದು ಮುತ್ತುಗಳು
ನೂರಾರು
ಸೂರ್ಯನ ಕಿರಣಕೆ ಅವಿಯಾಗುವುದು
ನೀರು
ಜಗಕ್ಕೆ ಪ್ರಕೃತಿ ಮಾತೆಯೇ ಗುರು

ಕಂಗಳ ತಣಿಸುವುದು ಮಂಜಿನ ಹನಿ
ಮುಂಜಾನೆ ಬೀಳುವುದು ತಂಪಾದ ಇಬ್ಬನಿ
ಮಂಜು ಕರಗಿ ಉದುರುವುದು ಹಿಮಮಣಿ
ಮುಂಜಾನೆಯ ಸೊಬಗೇ ಸೌಂದರ್ಯದ
ಗಣಿ

**–ಚೇತನ ಭಾರ್ಗವ, ಬೆಂಗಳೂರು**

### ನಿಜವಾದ ಅಭಿಮಾನ ಸಾರ್ಥಕ್ಯವೂ...

ಸಕ್ಕರೆಯ ನಾಡೊಳಗೆ
ಅಕ್ಕರೆಯ ಬೀಡೊಳಗೆ
ಚೊಕ್ಕದೀ ನಡೆಯಿತು ಅಕ್ಷರದ ಜಾತ್ರೆ!...

ಚಿಂತನವು ಮಂಥನವೂ...
ಜೊತೆಗಿಷ್ಟು ಗೊಂದಲವು!
ಇದ್ದದ್ದೇ ತಾನೇ ಇದು ಬಾಳಯಾತ್ರೆ!....

ಬೀದರದ ಆ ಮೂಲೆ
ಕೋಲಾರದೀ ಮೂಲೆ
ಎಲ್ಲ ಕಡೆಯಿಂದಲೂ ಜನ ಬಂದಿದ್ದರು....

ತಾಯ ಹಬ್ಬಕೆ ಪ್ರೀತಿ
ಜೊತೆಗಿಷ್ಟು ಅಭಿಮಾನ!...
"ಮೈ ಮನವ" ಜೊತೆಯಲ್ಲಿ ತಂದಿದ್ದರು
....

ಜಾನಪದ ಭೀಷ್ಮರಾ
ಗಾಂಭೀರ್ಯ ನುಡಿಗಳು
ಹಬ್ಬಕ್ಕೆ ಮೆರುಗನ್ನು ತಂದಿದ್ದವು...

ಕಾಯಕವೇ ಕೈಲಾಸ
ಎಂದರಿತು ದುಡಿದವರ
"ನಿಜವಾದ ಅಭಿಮಾನ" ಸಾರ್ಥಕ್ಯವೂ!....

ಯುಗಗಳಿರುವಾವರೆಗೂ
ಜಗಗಳಿರುವಾವರೆಗೂ
ಕನ್ನಡವೇ ಆಗಿರಲಿ ತಾಯಿ ನುಡಿಯು....

**– ಶೇಖರಯ್ಯ ಟಿ ಎಚ್ ಎಂ**
ಗೆದ್ದಲಗಟ್ಟೆ, ಕೂಡ್ಲಿಗಿ

# ಬೆಳಗಾವಿಯ ಕಾಂಗ್ರೆಸ್ ಸಮ್ಮೇಳನಕ್ಕೆ ಶತಮಾನೋತ್ಸವದ ಸಂಭ್ರಮ

ಡಿಸೆಂಬರ್ 27ರ ದಿನ ಸ್ವಾತಂತ್ರ್ಯ ಹೋರಾಟದ ಅತ್ಯಂತ ಮಹತ್ವದ ಘಟ್ಟವಾದ ಕಾಂಗ್ರೆಸ್ ಕಮಿಟಿಯ ಸಮ್ಮೇಳನ ನಡೆದ ಶತಮಾನೋತ್ಸವದ ಮಹತ್ತರ ಘಳಿಗೆಯನ್ನು ಇಂದು ಮತ್ತೊಮ್ಮೆ ಬೆಳಗಾವಿಯಲ್ಲಿ ಆಚರಿಸುತ್ತಿದ್ದು ಆ ಹಿನ್ನೆಲೆಯಲ್ಲಿ ಇಡೀ ಬೆಳಗಾವಿ ನಗರ ನವ ವಧುವಿನಂತೆ ಸಿಂಗಾರಗೊಂಡಿದೆ.

ಗಾಂಧೀಜಿಯವರ ಪರಮ ಶಿಷ್ಯರಲ್ಲಿ ಒಬ್ಬರಾದ ಗಂಗಾಧರ್ ದೇಶಪಾಂಡೆ ಅವರು ಬೆಳಗಾವಿ ಸಮೀಪದ ಹುದಲಿಯಲ್ಲಿ ಚರಕದಿಂದ ಖಾದಿ ಬಟ್ಟೆಯನ್ನು ತಯಾರಿಸುತ್ತಿದ್ದರು.ಮಂಗಳೂರಿನ ಕಟ್ಟಾ ಕಾಂಗ್ರೆಸಿಗರಾದ ಕಾರ್ನಾಡ ಸದಾಶಿವರಾಯರು ಗಾಂಧೀಜಿಯವರಿಗೆ ಅತ್ಯಂತ ಹತ್ತಿರದವರಾಗಿದ್ದು 1924ರ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿಯೇ ನಡೆಯಬೇಕು ಎಂಬುದು ಇವರಿಬ್ಬರ ಒತ್ತಾಸೆಯಾಗಿತ್ತು. ಬೆಳಗಾವಿ ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಯಲ್ಲಿದ್ದು ಪೋರ್ಚುಗೀಸರ ವಶದಲ್ಲಿದ್ದ ಗೋವಾಗಳಿಗೆ ಹತ್ತಿರದಲ್ಲಿದ್ದು ಬೆಳಗಾವಿಯಲ್ಲಿ ಹಿಂದಿ ಪ್ರಚಾರವನ್ನು ಸುಲಭವಾಗಿ ಮಾಡಬಹುದು ಮತ್ತು ಬೆಳಗಾವಿಯ ಹವಾಮಾನ ಬಹಳ ಚೆನ್ನಾಗಿ ಇದ್ದುದು ಅವರ ಈ ಒತ್ತಾಸೆಯ ಹಿಂದಿನ ಕಾರಣವಾಗಿತ್ತು. ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಹುಬ್ಬಳ್ಳಿಯ ಜನ ಇದಕ್ಕೆ ತಕರಾರು ತೆಗೆದು ಬೆಳಗಾವಿಯವರಿಗೆ ಸಮ್ಮೇಳನದ ಖರ್ಚು ವೆಚ್ಚಗಳನ್ನು ನಿಭಾಯಿಸಲು ಸಾಧ್ಯವಾಗುವುದಿಲ್ಲ ಎಂದು ಹೇಳಿದಾಗ ಗಂಗಾಧರ್ ರಾವ್ ದೇಶಪಾಂಡೆ ಅವರು 25 ಸಾವಿರ ರೂಪಾಯಿಗಳನ್ನು ಮೂರು ಜನ ಜೈನ ಮತ್ತು ಬ್ರಾಹ್ಮಣ ದಾನಿಗಳಿಂದ ಹಣವನ್ನು ಪಡೆದು ಬಾಂಡ್ ಬರೆದುಕೊಟ್ಟರು. ಈ ಮೊದಲು ಎರಡು ಬಾರಿ ಬೇರೆ ಬೇರೆ ಕಾರಣಗಳಿಗಾಗಿ ಬೆಳಗಾವಿಗೆ ಭೇಟಿ ನೀಡಿದ ಗಾಂಧೀಜಿಯವರು ಮುಂದೆ ಬೆಳಗಾವಿಯಲ್ಲಿ ಸಮ್ಮೇಳನವನ್ನು ನಡೆಸಲು ಅಧಿಕೃತ ಒಪ್ಪಿಗೆ ದೊರೆತ ಮೇಲೆ ಸಮ್ಮೇಳನಕ್ಕೆ ಭರದ ಸಿದ್ಧತೆ ನಡೆಯಿತು.

ಇಂದಿನ ಜನನಿಬಿಡ ತಿಲಕವಾಡಿ ಅಂದು ಸಂಪೂರ್ಣ ಖಾಲಿ ಮೈದಾನವಾಗಿದ್ದು ಆಗ ಬೆಳಗಾವಿಯ ಒಟ್ಟು ಜನಸಂಖ್ಯೆ ಕೇವಲ 30,000 ಇತ್ತು. ಇಂದಿನ ಪಾಕಿಸ್ತಾನ, ಬರ್ಮಾಗಳು ಕೂಡ ಭಾರತದ ಭಾಗಗಳೇ ಆಗಿದ್ದು ಸಮ್ಮೇಳನಕ್ಕೆ ಆರೂವರೆ ಸಾವಿರಕ್ಕೂ ಹೆಚ್ಚು ಜನ ಪ್ರತಿನಿಧಿಗಳಾಗಿ ಬರುವ ನಿರೀಕ್ಷೆಯಿದ್ದು ಲಾಹೋರ್ ರಂಗೂನ್ ಮತ್ತು ಶ್ರೀಲಂಕಾಗಳಿಂದಲೂ ಪ್ರತಿನಿಧಿಗಳು ಬೆಳಗಾವಿಗೆ ಬಂದಿದ್ದರು.



ಜವಾಹರ್ ಲಾಲ್ ನೆಹರು, ಮೋತಿಲಾಲ್ ನೆಹರು, ಅನಿಬೆಸೆಂಟ್, ಸರೋಜಿನಿ ನಾಯ್ಡು, ಚಕ್ರವರ್ತಿ ರಾಜಗೋಪಾಲಾಚಾರಿ, ಚಿತ್ತರಂಜನ್ ದಾಸ್, ಸೈಬುದ್ದೀನ್ ಕಿಚಲ್ಗೊರ್,ಲಾಲಾ ಲಜಪತ್ ರಾಯ್, ಮದನ್ ಮೋಹನ್ ಮಾಳವಿಯ, ಬಾಬು ರಾಜೇಂದ್ರ ಪ್ರಸಾದ್, ಮೌಲಾನಾ ಅಬುಲ್ ಕಲಂ ಮತ್ತು ಕಿಶನ್ ಸಿಂಗ್ ಬಂದವರಲ್ಲಿ ಪ್ರಮುಖರು. ಕಿಶನ್ ಸಿಂಗರ ಪುತ್ರ ಸ್ವಾತಂತ್ರ್ಯ ಸಂಗ್ರಾಮದ ವೀರಯೋಧ 17ರ ಹರೆಯದ ಭಗತ್ ಸಿಂಗ್ ಕೂಡ ಪತ್ರಕರ್ತರಾಗಿ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಅಧಿವೇಶನಕ್ಕೆ ಬರುವ ಜನರಿಗೆ ಊಟ, ವಸತಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದ್ದು ಬೆಳಗಾವಿಯ ತಿಲಕವಾಡಿಯಲ್ಲಿ ಒಂದು ಬಾವಿಯನ್ನು ತೋಡಲಾಗಿದ್ದು ಇದರ ವ್ಯವಸ್ಥೆಯನ್ನು ಲಿಂಗೋ ವಿರೂಪಾಕ್ಷ ದೇಶಪಾಂಡೆ ಅವರು ನೋಡಿಕೊಂಡರು. ನಾಲ್ಕು ಸಾವಿರ ವೆಚ್ಚದಲ್ಲಿ ನಿರ್ಮಾಣವಾದ ಆ ಬಾವಿಯನ್ನು ಇಂದಿಗೂ 'ಕಾಂಗ್ರೆಸ್ ಬಾವಿ' ಎಂದು ಕರೆಯಲಾಗುತ್ತದೆ.

ಅಧಿವೇಶನಕ್ಕೆ ಬಂದವರ ಊಟದ ವ್ಯವಸ್ಥೆಯನ್ನು ಕಾಮೋಜಿರಾವ್ ಗೋಡ್ಸೆ ಅವರು ವಹಿಸಿಕೊಂಡರು. ಅವರು ನಿರ್ಮಿಸಲಾಗಿದ್ದ ಟೆಂಟ್ಗಳು ಅತ್ಯಂತ ವಿಶಾಲವಾಗಿಯೂ ಅಚ್ಚುಕಟ್ಟಾಗಿಯೂ ಇದ್ದವು ಎಂದು ಗಾಂಧೀಜಿಯವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ಶ್ಲಾಘಿಸಿದ್ದರು.

ತಿಲಕವಾಡಿಯ ಮೈದಾನದಲ್ಲಿ ರೈಲು ಹಳಿಯು ಹಾದು ಹೋಗಿದ್ದು ಸಮ್ಮೇಳನಕ್ಕೆ ಬರುವವರ ಅನುಕೂಲಕ್ಕಾಗಿ ಅಲ್ಲೊಂದು ತಾತ್ಕಾಲಿಕ ರೈಲು(ಫ್ಲ್ಯಾಗ್ ಲೈನ್ ) ನಿಲ್ದಾಣದ ವ್ಯವಸ್ಥೆಯನ್ನು ಮಾಡಿದ್ದರು. ಇಡೀ ಸಮ್ಮೇಳನದ ಸಭಾಂಗಣವನ್ನು ವಿಜಯನಗರ ಸಾಮ್ರಾಜ್ಯದ ನೆನಪಿನಲ್ಲಿ ನಿರ್ಮಿಸಲಾಗಿದ್ದು ಸಮ್ಮೇಳನದ ಮೈದಾನವನ್ನು 'ವಿಜಯನಗರ'ವೆಂದೇ ಹೆಸರಿಡಲಾಗಿದ್ದು ಸಭೆ ನಡೆಯುವ ಸ್ಥಳವನ್ನು 'ವೀರ ಸೌಧ' ಎಂದು ಕರೆಯಲಾಗಿತ್ತು . ಅಧಿವೇಶನದ ಮಂಟಪದಲ್ಲಿ ವಿರೂಪಾಕ್ಷ ದೇವಸ್ಥಾನದ ಪ್ರತಿ ಕೃತಿಯನ್ನು ನಿರ್ಮಾಣ ಮಾಡಲಾಗಿದ್ದು ಸಭಾಂಗಣವನ್ನು ಪ್ರವೇಶಿಸುವವರಿಗೆ ವಿರೂಪಾಕ್ಷ ದೇವಸ್ಥಾನದ ಒಳಗೆ ಪ್ರವೇಶ ಮಾಡಿದಂತೆ ಭಾಸವಾಗುತ್ತಿತ್ತು. ಖರ್ಚನ್ನು ಕಡಿಮೆ ಮಾಡಲು ಈ ಹಿಂದೆ ಕಾಕಿನಾಡದಲ್ಲಿ ಬಳಸಿದ ಟೆಂಟುಗಳನ್ನು ಸಮ್ಮೇಳನಕ್ಕೆ ಬಳಸಿಕೊಂಡಿದ್ದರೂ ಶಾಮಿಯಾನಕ್ಕಾಗಿ ಹನ್ನೊಂದು ಸಾವಿರ ರೂ ಹಣ ಖರ್ಚಾಗಿತ್ತು.ಸಮ್ಮೇಳನದ ಅಧ್ಯಕ್ಷತೆಯಲ್ಲಿ ನಡೆದ ಈ ಸಮ್ಮೇಳನವನ್ನು ಗಾಂಧೀಜಿಯವರು

ಇಂಗ್ಲಿಷನಲ್ಲಿ ಭಾಷಣ ಮಾಡಿದ್ದು ಗೊತ್ತುವಳಿಗಳಲ್ಲಿ ಮೋ.ಕ.ಗಾಂಧಿ ಎಂದು ಕನ್ನಡದಲ್ಲಿ ಸಹಿ ಮಾಡಿದ್ದರು ಎಂಬುದು ವಿಶೇಷವಾಗಿದ್ದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿತ್ತು. ಎ ಐ ಸಿ ಸಿ ಸದಸ್ಯತ್ವ ಪಡೆಯಲು – ಅಲ್ಲಿಯವರೆಗೆ ಹತ್ತು ರೂಪಾಯಿ ಹಣ ನಿಗದಿಯಾಗಿದ್ದು ಬೆಳಗಾವಿಯ ಸಮ್ಮೇಳನದ ಸಮಯದಲ್ಲಿ ಈ ಮೊತ್ತ ದುಬಾರಿ ಎಂದು ಗಾಂಧೀಜಿಯವರು ಈ ಸದಸ್ಯತ್ವ ಶುಲ್ಕವನ್ನು ಒಂದು ರೂಪಾಯಿಗೆ ಇಳಿಸಿದ್ದರು.

ಇದೇ ಅಧಿವೇಶನದಲ್ಲಿ ಮೊತ್ತ ಮೊದಲಬಾರಿ ವಂದೇ ಮಾತರಂ ಗೀತೆಯನ್ನು ಸಾಮೂಹಿಕವಾಗಿ ವಿಷ್ಣು ದಿಗಂಬರ ಪುಲಸ್ಕರ್ ಅವರ ನೇತೃತ್ವದಲ್ಲಿ ಹಾಡಿದರು. ಈ ಮೊದಲು ದಾದಾಬಾಯಿ ನವರೋಜಿ ಅವರ ನೇತೃತ್ವದಲ್ಲಿ ನಡೆದ ಕಲ್ಕತ್ತಾ ಅಧಿವೇಶನದಲ್ಲಿ ರವೀಂದ್ರನಾಥ್ ಟ್ಯಾಗೋರ್ ಅವರು ಹಾಡಿದ ವಂದೇಮಾತರಂ ಗೀತೆಗಿಂತ ಇದು ಭಿನ್ನವಾಗಿತ್ತು. ಇಲ್ಲಿಗೆ ನಮ್ಮ ಗದುಗಿನ ಹುಯಿಲಗೋಳ ನಾರಾಯಣರಾಯರು ಬರೆದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಹಾಡನ್ನು ಪ್ರಾರ್ಥನೆಯಾಗಿ ಹಾಡಲಾಗಿದ್ದು, ಹಾಡುಗಾರರ ತಂಡದಲ್ಲಿ ಹತ್ತು ವರ್ಷದ ಪುಟ್ಟ ಬಾಲಕಿ ಗಂಗೂಬಾಯಿ ಹಾನಗಲ್ ಅವರು ಇದ್ದರು ಎಂಬುದು ಹೆಮ್ಮೆಯ ವಿಷಯವಾಗಿತ್ತು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಸಮ್ಮೇಳನದಲ್ಲಿ ಒಟ್ಟು ಇಪ್ಪತ್ತೊಂದು ಠರಾವುಗಳನ್ನು ತೆಗೆದುಕೊಳ್ಳಲಾಯಿತು. ಮೊದಲನೆಯದಾಗಿ ಅಸಹಕಾರ ಚಳುವಳಿಯ ಮೂಲಕ ಬ್ರಿಟಿಷರನ್ನು ಹಿಮ್ಮೆಟ್ಟಿಸುವುದು, ಎರಡನೆಯದಾಗಿ ಹಿಂದೂ ಮುಸ್ಲಿಂ ಸಂಘಟನೆಗಳು ಒಟ್ಟುಗೂಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಬೇಕು ಎನ್ನುವುದು ಪ್ರಮುಖ ಠರಾವುಗಳಾಗಿದ್ದವು.

ಸಮ್ಮೇಳನದ ನಂತರ 1925 ರ ಜನವರಿ ಒಂದನೇ ತಾರೀಕು ಯಂಗ್ ಇಂಡಿಯಾ ಪತ್ರಿಕೆಯನ್ನು ಸ್ಥಾಪಿಸಿದ್ದು ತಮ್ಮ ಮೊದಲ ಲೇಖನದಲ್ಲಿ ಗಾಂಧೀಜಿಯವರು ಬೆಳಗಾವಿ ಸಮ್ಮೇಳನದಲ್ಲಿ ಭಾಗಿಯಾಗಿದ್ದ ಜನರ ಉತ್ಸಾಹ, ಸಂಯಮ ಮತ್ತು ರಾಷ್ಟ್ರಭಕ್ತಿಯನ್ನು ಮೆಚ್ಚಿ ಬರೆದ ಲೇಖನ ಪ್ರಕಟವಾಗಿತ್ತು.

ಅಧಿವೇಶನದಲ್ಲಿ ಸ್ವಚ್ಛತಾ ಸಮಿತಿಯನ್ನು ನಿರ್ಮಾಣ ಮಾಡಲಾಗಿದ್ದು ಕಾಕಾ ಕಾಲೇಕರ್ ಅವರು ಈ ತಂಡದ ನೇತೃತ್ವವನ್ನು ವಹಿಸಿಕೊಂಡಿದ್ದರು.

ಸುಮಾರು 70 ಜನರ ತಂಡದಲ್ಲಿ 40 ಜನ ಬ್ರಾಹ್ಮಣರು ಮತ್ತು 30 ಜನ ಇತರೆ ಜಾತಿಯವರು ಇದ್ದದ್ದು ಈ ಸಮ್ಮೇಳನದ ವೈಶಿಷ್ಟವಾಗಿದ್ದು ಸ್ವಚ್ಛತಾ ಕಾರ್ಯ ಕೇವಲ ದಲಿತರದ್ದು ಮಾತ್ರವಲ್ಲ ಎಂದು ಈ ಸಮ್ಮೇಳನದ ಮೂಲಕ ತೋರಿಸಿದ ಸ್ವಾತಂತ್ರ್ಯ ಹೋರಾಟಗಾರರ ಮಾದರಿ ಪ್ರಶಂಸೆಗೆ ಪಾತ್ರವಾಗಿತ್ತು.

ಅಧಿವೇಶನದ ಬಾವಿ ತೋಡಿಸಲು ಅಂದಿನ ಕಾಲಕ್ಕೆ 4370 ರೂ ಹಣ ಖರ್ಚಾಗಿದ್ದು 1924 ಡಿಸೆಂಬರ್ 26 27ರ ಎರಡು ದಿನದ ಸಮ್ಮೇಳನಕ್ಕೆ ಒಟ್ಟು ಖರ್ಚು 2,20,829 ಹಣ ಖರ್ಚಾಗಿದ್ದು ಈ ಎಲ್ಲ ವ್ಯವಹಾರವನ್ನು ನೋಡಿಕೊಂಡ ಲಿಂಗೋ ವಿರೂಪಾಕ್ಷ ದೇಶಪಾಂಡೆಯವರು ಈ ಎಲ್ಲಾ ಲೆಕ್ಕಪತ್ರಗಳನ್ನು ಎ ಐ ಸಿ ಸಿ ಗೆ ನೀಡಿದರು.

ಅಧಿವೇಶನದ ನಂತರ ಗಾಂಧೀಜಿಯವರು ಗೋಕಾಕ್ ತಾಲೂಕಿನ ಹುದಲಿಯಲ್ಲಿ ಕೆಳದಿನಗಳ ಕಾಲ ವಾಸ್ತವ್ಯ ಮಾಡಿ ಅಲ್ಲಿನ ಖಾದಿ ಕೇಂದ್ರವನ್ನು ಬಲಪಡಿಸಿದರು.

ಇಲ್ಲಿಯೇ ಅವರನ್ನು ಭೇಟಿಯಾದ ಹರ್ಡೇಕರ್ ಮಂಜಪ್ಪ ಮತ್ತು ಸರ್ ಸಿದ್ದಪ್ಪ ಕಂಬಳಿಯವರು ಬಸವಣ್ಣನವರ ವಚನಗಳ ಸಾಮಾಜಿಕತೆಯನ್ನು ತಿಳಿಸಿದರು. ಬಸವಣ್ಣನವರ ಸಮಾಜೋ ಕ್ರಾಂತಿಯ ವಿವರಗಳನ್ನು ಪಡೆದ ಗಾಂಧಿ ದಂಗಾದರು. ಎಲ್ಲ ಮಾತುಕತೆಗಳು ಮುಗಿದ ನಂತರ ಹರ್ಡೇಕರ್ ಮಂಜಪ್ಪನವರು ಗಾಂಧೀಜಿಯವರನ್ನು 'ಕನ್ನಡದ ಜನರಿಗೆ ತಾವೇನಾದರೂ ವಿಶೇಷವಾಗಿ ಹೇಳುವುದಿದೆಯೇ? ಎಂದು ಕೇಳಿದಾಗ ಜಗಜ್ಯೋತಿ ಬಸವೇಶ್ವರನ ನಾಡಿನಲ್ಲಿ ಹುಟ್ಟಿದ ಜನರಿಗೆ ಅವರ ವಚನಗಳ ಮೂಲಕ ಎಲ್ಲವ ನ್ನೂ ಶರಣರು ತಿಳಿಸಿಕೊಟ್ಟಿದ್ದು ಅವುಗಳ ಅನುಸರಣೆಯಲ್ಲಿಯೇ ಎಲ್ಲವನ್ನು ಕಂಡುಕೊಳ್ಳಬೇಕು' ಎಂದು ಅತ್ಯಭಿಮಾನದಿಂದ ಗಾಂಧೀಜಿಯವರು ಹೇಳಿದರು. ಇದೀಗ ಗಾಂಧೀಜಿಯವರು ಅಧ್ಯಕ್ಷರಾಗಿದ್ದ ಮೊದಲ ಮತ್ತು ಏಕೈಕ ಕಾಂಗ್ರೆಸ್ ಸಮ್ಮೇಳನದ ಶತಮಾನೋತ್ಸವ ಕಾರ್ಯಕ್ರಮವನ್ನು ಬೆಳಗಾವಿಯಲ್ಲಿ ಹಮ್ಮಿಕೊಳ್ಳಲಾಗಿದ್ದು ಕರ್ನಾಟಕ ಘನ ಸರ್ಕಾರವು ಮಹಾತ್ಮ ಗಾಂಧೀಜಿಯವರ ವಿಶೇಷ ಪುತ್ತಳಿಯನ್ನು ಅನಾವರಣ ಮಾಡಲಿದೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

### ಅಧ್ಯಾಯ 8 : ಅನುವಂಶೀಯತೆ

1. "ತಂದೆಯಿಂದ ಆನುವಂಶೀಯವಾಗುವ ವರ್ಣತಂತುಗಳು ಮಗುವಿನ ಲಿಂಗವನ್ನು ನಿರ್ಧರಿಸುತ್ತವೆ" ವಿವರಿಸಿ. (Apr-2019 , Jun-2019, Jun-2022)

ಉತ್ತರ: • ಎಲ್ಲಾ ಮಕ್ಕಳು ತಮ್ಮ ತಾಯಿಯಿಂದ ಅವರು ಹುಡುಗ ಅಥವಾ ಹುಡುಗಿಯಾಗಿದ್ದರೂ X ವರ್ಣತಂತುವನ್ನೇ ಪಡೆದುಕೊಳ್ಳುತ್ತಾರೆ.

• ತಂದೆಯಿಂದ X ವರ್ಣತಂತು ಪಡೆದ ಮಗು ಹುಡುಗಿಯಾಗುತ್ತದೆ ಮತ್ತು Y ವರ್ಣತಂತುವನ್ನು ಪಡೆದ ಮಗು ಹುಡುಗನಾಗುತ್ತದೆ.

• ಆದ್ದರಿಂದ ತಂದೆಯಿಂದಲೇ ಮಗುವಿನ ಲಿಂಗ ನಿರ್ಧಾರವಾಗುತ್ತದೆ.

2. ಪುರುಷ ಲಿಂಗವರ್ಣತಂತುಗಳು ಮತ್ತು ಮಹಿಳೆಯ ಲಿಂಗವರ್ಣತಂತುಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ. (Apr–2019)

ಉತ್ತರ: • ಮಹಿಳೆಯ ಲಿಂಗ ವರ್ಣತಂತುಗಳು ಪರಿಪೂರ್ಣ ಜೋಡಿಯಾಗಿದ್ದು , ಸಮಾನ ಗಾತ್ರದ XX ವರ್ಣತಂತುಗಳಾಗಿವೆ,

• ಪುರುಷ ಲಿಂಗ ವರ್ಣತಂತುಗಳು ಜೋಡಿಯಲ್ಲಿ ಸಾಮಾನ್ಯ ಗಾತ್ರದ X ವರ್ಣತಂತು ಮತ್ತು ಗಾತ್ರದಲ್ಲಿ ಚಿಕ್ಕದಾದ Y ವರ್ಣತಂತುಗಳಿವೆ.

3. ಎತ್ತರದ (TT) ಬಟಾಣಿ ಸಸ್ಯವನ್ನು ಕುಬ್ಜ (tt) ಬಟಾಣಿ ಸಸ್ಯದೊಂದಿಗೆ ಸಂಕರಣಗೊಳಿಸಿದಾಗ ಏಕತಳೀಕರಣದ F2 ಪೀಳಿಗೆಯಲ್ಲಿ ಉಂಟಾಗುವ ಫಲಿತಾಂಶವನ್ನು ಚೆಕ್ಕರ್ ಬೋರ್ಡ್‌ನ ಸಹಾಯದಿಂದ ವ್ಯಕ್ತಪಡಿಸಿ. ಮತ್ತು ಸಸ್ಯಗಳ ವಿಧಗಳ ಅನುಪಾತವನ್ನು ತಿಳಿಸಿ. (APR-2022,Jun-2022)

ಉತ್ತರ:

ಚೆಕ್ಕರ್ ಬೋರ್ಡ್

| ಲಿಂಗಾಣುಗಳು | T | t |
|---|---|---|
| T | TT | Tt |
| t | Tt | tt |

ವ್ಯಕ್ತರೂಪದ ಅನುಪಾತ – 3 : 1 ಜೀನ್ ನಮೂನೆ ಅನುಪಾತ – 1 : 2 : 1

4. ಮೆಂಡಲರು ಕೆಂಪು ಹೂಗಳನ್ನು [RR] ಹೊಂದಿರುವ ಸಸ್ಯಗಳನ್ನು ಬಿಳಿ ಹೂಗಳನ್ನು [rr] ಹೊಂದಿರುವ ಸಸ್ಯಗಳೊಂದಿಗೆ ಸಂಕರಿಸಿ ಅವುಗಳಿಂದ ಸಂತತಿಯನ್ನು ಉತ್ಪಾದಿಸಿದರು. F1 ಪೀಳಿಗೆಯಲ್ಲಿ ದೊರೆತ ಕೆಂಪು ಹೂಗಳನ್ನು ಹೊಂದಿರುವ ಸಸ್ಯಗಳು, ಪೋಷಕ ಪೀಳಿಗೆಯ ಕೆಂಪು ಹೂಬಿಡುವ ಸಸ್ಯಗಳಿಗಿಂತ ಭಿನ್ನವಾಗಿದ್ದವು. ಏಕೆ ? ಕಾರಣಗಳೊಂದಿಗೆ ವಿವರಿಸಿ. (Sep-2020)

ಉತ್ತರ: ಪೋಷಕ ಸಸ್ಯಗಳಲ್ಲಿ ಕೆಂಪು ಹೂಬಿಡುವ ಗುಣವು ಪ್ರಬಲ ಹಾಗೂ ಬಿಳಿ ಹೂ ಬಿಡುವ ಗುಣವು ದುರ್ಬಲವಾಗಿದೆ. ಪೋಷಕ ಜೀವಿಯ ಲಿಂಗಾಣುಗಳು ಈ ಗುಣಗಳ ಒಂದು ಪ್ರತಿಯನ್ನು ಮಾತ್ರ ಹೊಂದಿರುತ್ತವೆ.

F1 ಪೀಳಿಗೆಯಲ್ಲಿನ ಸಸ್ಯವು ಪ್ರಬಲ ಗುಣದ ಒಂದು ಪ್ರತಿಯನ್ನು [R] ಹಾಗೂ ದುರ್ಬಲ ಗುಣದ ಒಂದು ಪ್ರತಿಯನ್ನು [r] ಪಡೆದಿರುತ್ತದೆ.

ಆದ್ದರಿಂದ F1 ಪೀಳಿಗೆಯಲ್ಲಿನ ಎಲ್ಲ ಸಸ್ಯಗಳೂ ಸಹ ಕೆಂಪು ಹೂಗಳನ್ನು ನೀಡುತ್ತವೆ. ಕೆಂಪು ಹೂ ಬಿಡುವ ಪೋಷಕ ಜೀವಿಯ ಜೀನ್ ನಮೂನೆ RR ಆಗಿದ್ದರೆ F1 ಪೀಳಿಗೆಯ ಸಸ್ಯದ ಜೀನ್ ನಮೂನೆ Rr ಆಗಿರುತ್ತದೆ.

5. ಮೆಂಡೆಲ್ ರವರು ಬಳಸಿಕೊಂಡ ಬಟಾಣಿ ಸಸ್ಯದ ಹಲವು ವಿಭಿನ್ನ ಗೋಚರ ಗುಣಗಳನ್ನು ಹೆಸರಿಸಿ.

ಉತ್ತರ: ಬೀಜದ ಬಣ್ಣ – ಹಳದಿ , ಹಸಿರು
ಹೂವಿನ ಬಣ್ಣ – ನೇರಳೆ , ಬಿಳಿ
ಕಾಯಿಯ ಬಣ್ಣ – ಹಸಿರು , ಹಳದಿ
ಬೀಜದ ಆಕಾರ – ದುಂಡನೇಯ , ಸುಕ್ಕಾದ
ಹೂವಿನ ಸ್ಥಾನ – ಕಾಂಡದ ತುದಿ , ಕಂಕುಳ
ಸಸ್ಯದ ಗಾತ್ರ – ಎತ್ತರ , ಗಿಡ್ಡ (ಕುಬ್ಜತೆ)

6. ಕೆಂಪು ಹೂ ಬಿಡುವ ಎತ್ತರದ ಬಟಾಣಿ ಸಸ್ಯ ( TTRR ) ವನ್ನು ಬಿಳಿ ಹೂ ಬಿಡುವ ಗಿಡ್ಡನೆಯ ಬಟಾಣಿ ಸಸ್ಯ (ttrr) ದೊಂದಿಗೆ ಸಂಕರಗೊಳಿಸಿದೆ. ಇವುಗಳಿಂದ
i) F1 ಪೀಳಿಗೆಯಲ್ಲಿ ಪಡೆಯುವ ಸಸ್ಯಗಳ ವಿಧಗಳನ್ನು ತಿಳಿಸಿ.
ii) F1 ಪೀಳಿಗೆಯಲ್ಲಿ ಪಡೆದ ಸಸ್ಯಗಳನ್ನು ಸಂಕರಗೊಳಿಸಿದಾಗ F2 ಪೀಳಿಗೆಯಲ್ಲಿ ದೊರೆಯುವ ಸಸ್ಯಗಳ ಅನುಪಾತವನ್ನು ಬರೆಯಿರಿ ಮತ್ತು ಸಸ್ಯಗಳ ವಿಧಗಳನ್ನು ಹೆಸರಿಸಿ, March-2023

ಉತ್ತರ: i) * ಪೋಷಕರು : TT RR X tt rr
* ಲಿಂಗಾಣುಗಳು : TR X tr
* F1 ಪೀಳಿಗೆ : Tt Rr ಅಥವಾ ಮಿಶ್ರ ಸಸ್ಯಗಳು / ಮಿಶ್ರತಳಿ
ii) F2 ಪೀಳಿಗೆಯಲ್ಲಿ ದೊರೆಯುವ ಸಸ್ಯಗಳ ಅನುಪಾತ– 9:3:3:1
* ಸಸ್ಯ ವಿಧಗಳು
• ಎತ್ತರದ ಕೆಂಪು ಹೂ ಬಿಡುವ ಬಟಾಣಿ ಸಸ್ಯಗಳು – 9
• ಎತ್ತರ – ಬಿಳಿ ಹೂ ಬಿಡುವ ಬಟಾಣಿ ಸಸ್ಯಗಳು – 3
• ಗಿಡ್ಡ – ಕೆಂಪು ಹೂ ಬಿಡುವ ಬಟಾಣಿ ಸಸ್ಯಗಳು – 3
• ಗಿಡ್ಡ – ಬಿಳಿ ಹೂ ಬಿಡುವ ಬಟಾಣಿ ಸಸ್ಯಗಳು – 1

7. ದುಂಡನೆಯ ಹಳದಿ ಬಣ್ಣದ ಬೀಜಗಳನ್ನು ಬಿಡುವ ಸಸ್ಯಗಳನ್ನು ಸ್ವಕೀಯ ಪರಾಗಸ್ಪರ್ಶಕ್ಕೆ ಒಳಪಡಿಸಲಾಗಿದೆ. F2 ಪೀಳಿಗೆಯಲ್ಲಿ ದೊರೆಯುವ ಫಲಿತಾಂಶವನ್ನು ಚೆಕ್ಕರ್ ಬೋರ್ಡ ಸಹಾಯದಿಂದ ವ್ಯಕ್ತಪಡಿಸಿ. F2 ಪೀಳಿಗೆಯಲ್ಲಿ ದೊರೆಯುವ ಸಸ್ಯಗಳ ವಿಧಗಳನ್ನು ತಿಳಿಸಿ (Apr-2020) ಅಥವಾ

8. ದುಂಡನೆಯ, ಹಸಿರು ಬಣ್ಣದ ಬೀಜಗಳನ್ನು ಉತ್ಪಾದಿಸುವ ಬಟಾಣಿ ಸಸ್ಯವನ್ನು (RR yy), ಸುಕ್ಕಾದ, ಹಳದಿ ಬಣ್ಣದ ಬೀಜಗಳನ್ನು ಉತ್ಪಾದಿಸುವ ಬಟಾಣಿ ಸಸ್ಯದೊಂದಿಗೆ (rr YY) ಸಂಕರಣಗೊಳಿಸಿದೆ. F2 ಪೀಳಿಗೆಯ ಫಲಿತಾಂಶವನ್ನು ಚೆಕ್ಕರ್ ಬೋರ್ಡ್‌ನ ಸಹಾಯದಿಂದ ವ್ಯಕ್ತಪಡಿಸಿ ಮತ್ತು ಸಸ್ಯಗಳ ವಿಧಗಳ ಅನುಪಾತ ಬರೆಯಿರಿ. (June-2023)

ಉತ್ತರ: F2 ಪೀಳಿಗೆ RrYy X RrYy

| | RY | Ry | rY | ry |
|---|---|---|---|---|
| RY | RRYY | RRYy | RrYY | RrYy |
| Ry | RRYy | RRyy | RrYy | Rryy |
| rY | RrYY | RrYy | rrYY | rrYy |
| ry | RrYy | Rryy | rrYy | rryy |

* ಸಸ್ಯ ವಿಧಗಳು :
• ದುಂಡನೆಯ ಹಳದಿ ಬೀಜ – 9
• ದುಂಡನೆಯ ಹಸಿರು ಬೀಜ – 3 ಅನುಪಾತ = 9:3:3:1
• ಸುಕ್ಕಾದ ಹಳದಿ ಬೀಜ – 3
• ಸುಕ್ಕಾದ ಹಸಿರು ಬೀಜ – 1

9. ಜೀವಿಗಳಲ್ಲಿನ ಗುಣಗಳನ್ನು 'ಪ್ರಬಲ' ಹಾಗೂ 'ದುರ್ಬಲ ಗುಣಗಳೆಂದು ಹೇಗೆ ವರ್ಗೀಕರಿಸಲಾಗುತ್ತದೆ?

ಉತ್ತರ: • ಒಂದು ಗುಣಕ್ಕೆ ಸಂಬಂಧಿಸಿದ ವಂಶವಾಹಿಯ ಎರಡು ಪ್ರತಿಗಳಲ್ಲಿ ಹೆಚ್ಚು ವ್ಯಕ್ತವಾಗುವ ಗುಣವೇ ಪ್ರಬಲ ಗುಣ.

• ವಂಶವಾಹಿಯ ಜೋಡಿ ಪ್ರತಿಗಳಲ್ಲಿ ಕಡಿಮೆ ವ್ಯಕ್ತವಾಗುವ ಅಥವಾ ವ್ಯಕ್ತವಾಗದೇ ಇರುವ ಗುಣವೇ 'ದುರ್ಬಲ ಗುಣ'.

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

## ಅಪೂರ್ಣ ಅರ್ಜಿ ಪುನಃ ಭರ್ತಿಗೆ ಜ.05 ರವರೆಗೆ ಅವಕಾಶ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ(ನಗರ) ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ ಒಟ್ಟು 64 ಅಂಗನವಾಡಿ ಸಹಾಯಕಿಯರ ಗೌರವಸೇವೆ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಈಗಾಗಲೇ ಕಾಲಾವಕಾಶ ಮುಗಿದಿದ್ದು, ಅಪೂರ್ಣವಾದ ಅರ್ಜಿಗಳನ್ನು ಪುನಃ ಭರ್ತಿ ಮಾಡಲು ಜ.05 ರವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ಬಳ್ಳಾರಿ ನಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸುವಾಗ ವೆಬ್‌ಸೈಟ್‌ನಲ್ಲಿ ಒಟ್ಟು 4 ವಿವಿಧ ಹಂತಗಳಿದ್ದು, ಇದರಲ್ಲಿ ಕೆಲವರಿಗೆ 1ನೇ ಹಂತದಲ್ಲಿಯೇ ಅಪ್ಲಿಕೇಷನ್ ಸಕ್ಸಸ್‌ಫುಲ್ ಅಪ್‌ಲೋಡ್ ಎಂಬ ಮೆಸೇಜ್ ಅವರ ಮೊಬೈಲ್‌ಗೆ ಸ್ವೀಕೃತವಾಗಿರುವುದರಿಂದ ಅರ್ಜಿ ಪೂರ್ಣಗೊಳಿಸಿರುವುದಿಲ್ಲ.

ಸರ್ಕಾರದ ಆದೇಶದನ್ವಯ ಅರ್ಜಿ ಸಲ್ಲಿಸುವ 4 ಹಂತಗಳನ್ನು ಪೂರ್ಣಗೊಳಿಸದೆ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಜ.05 ರವರೆಗೆ ಅರ್ಜಿ ಪೂರ್ಣಗೊಳಿಸಲು ವೆಬ್‌ಸೈಟ್ ವಿಳಾಸ: https://karnemakaone.kar.nic.in/adcd/ ಮೂಲಕ ಅವಕಾಶ ನೀಡಿ ಆದೇಶಿಸಲಾಗಿದೆ.

ಅಭ್ಯರ್ಥಿಗಳು ಮೊದಲನೇ ಹಂತ ಆನ್‌ಲೈನ್‌ನಲ್ಲಿ ಅರ್ಜಿ ನಮೂನೆಯಲ್ಲಿ ಮಾಹಿತಿ ತುಂಬುವುದು. 2ನೇ ಹಂತದಲ್ಲಿ ಭಾವಚಿತ್ರ ಮತ್ತು ಸಹಿ ಅಪ್‌ಲೋಡ್ ಮಾಡಬೇಕು. 3ನೇ ಹಂತದಲ್ಲಿ ದಾಖಲಾತಿ ಅಪ್ಲೋಡ್ ಮಾಡಬೇಕು. 4ನೇ ಹಂತ ಆಧಾರ್ ಸಂಖ್ಯೆ ನಮೂದಿಸಿ, ಇ–ಹಸ್ತಾಕ್ಷರಯೊಂದಿಗೆ ಅರ್ಜಿ ಪೂರ್ಣಗೊಳಿಸಬೇಕು.

ಬಳ್ಳಾರಿ(ನಗರ)ದ ಅಂಗನವಾಡಿ ಸಹಾಯಕಿಯರ ಹುದ್ದೆಗೆ 259 ಅಪೂರ್ಣ ಅರ್ಜಿಗಳು ಸ್ವೀಕೃತವಾಗಿವೆ ಅಪೂರ್ಣವಾದ ಅರ್ಜಿದಾರರ ಹೆಸರನ್ನು ಆಯಾ ಅಂಗನವಾಡಿ ಕೇಂದ್ರದಲ್ಲಿ ಲಭ್ಯವಿರುತ್ತದೆ, ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ತೆಗೆದುಕೊಂಡು ಅರ್ಜಿ ಪೂರ್ಣಗೊಳಿಸಬೇಕು ಎಂದು ಬಳ್ಳಾರಿ(ನಗರ) ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ವಿದ್ಯಾರ್ಥಿಗಳ ಶೈಕ್ಷಣಿಕ ಸಾಮರ್ಥ್ಯ ಭಾವನೆಗಳು ಶಿಕ್ಷಕರಿಗೆ ಮಾತ್ರ ಗೊತ್ತು

### ಜ್ಞಾನಭಾರತಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಡಾ.ಕೆ.ಎಂ.ರವಿಕುಮಾರ್ ಹೇಳಿಕೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಯಶಸ್ವಿಯಾಗಲು ಶಿಕ್ಷಕರ ಪಾತ್ರ ಮಹತ್ವವಾಗಿದೆ ಎಂದು ಜ್ಞಾನಭಾರತಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಡಾ.ಕೆ.ಎಂ.ರವಿಕುಮಾರ್ ಹೇಳಿದರು.

ಪಟ್ಟಣದ ಜ್ಞಾನಭಾರತಿ ವಿದ್ಯಾ ಸಂಸ್ಥೆಯ ಜ್ಞಾನ ಸಮೃದ್ಧಿ 2024 ವಿಜ್ಞಾನ, ಕಲಾ ವಸ್ತು ಪ್ರದರ್ಶನ ಹಾಗೂ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ಯಶಸ್ವಿ ವಿದ್ಯಾರ್ಥಿಯಾಗಲು ಶಿಕ್ಷಕರ ಪರಿಶ್ರಮ ಸಾಕಷ್ಟಿದೆ, ತರಗತಿಗಳಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯ ಶಿಕ್ಷಕರಿಗೆ ಮಾತ್ರ ತಿಳಿದಿದ್ದು, ಅವನ ಭವಿಷ್ಯ ರೂಪಿಸಬೇಕಾದರೆ ಶಿಕ್ಷಕರು ವಿದ್ಯಾರ್ಥಿಗಳ ಮನಸ್ಸನ್ನು ಅರಿತು, ಆತನನ್ನು ಓದಿಗೆ ಹಚ್ಚಬೇಕು. ಮನೆಯಲ್ಲಿ ಪೋಷಕರು ಸಹ ಅಂದಿನ ಪಾಠಗಳ ಬಗ್ಗೆ ಮನೆಯಲ್ಲಿ ವಿದ್ಯಾರ್ಥಿಗಳನ್ನು ಪ್ರಶ್ನಿಸಿ ಅವುಗಳ ಪುನರ್ ಮನನ ಮಾಡಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿಬೇಕು ಎಂದು ತಿಳಿಸಿದರು.

ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಮಾತನಾಡಿ, ಹಿಂದುಳಿದ ತಾಲೂಕಿನಲ್ಲಿ ಶಿಕ್ಷಣವೆಂಬುದು ಗಗನ ಕುಸುಮವಾಗಿತ್ತು, ಇದನ್ನರಿತು ಅನಕ್ಷರಸ್ಥ ಜನರಿಗೆ ಶಿಕ್ಷಣದ ಮೂಲಕ ಸಂಸ್ಕಾರ ಕಲಿಸಲು ಜ್ಞಾನಭಾರತಿ ವಿದ್ಯಾಸಂಸ್ಥೆ ಅಕ್ಷರಶಃ 30 ವರ್ಷಗಳಿಂದ ತನ್ನ ಸೇವೆ ಮುಂದುವರಿಸಿದೆ. ಪ್ರಸ್ತುತ ಆರ್ಯುವೇದ ಕಾಲೇಜು ಸ್ಥಾಪನೆ ಮಾಡಿರುವುದು ಈ ಭಾಗದ ವಿದ್ಯಾರ್ಥಿಗಳಿಗೆ ಸುವರ್ಣ ಅವಕಾಶ ಒದಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಕೆ.ಎಂ.ವೀರೇಶ್ ರಚಿಸಿದ ಜ್ಞಾನಭಾರತಿ ವಿದ್ಯಾ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ದಿವಂಗತ ಕೆ.ಎಂ. ತಿಪ್ಪೇಸ್ವಾಮಿ ಜೀವನ ಆಧಾರಿತ ಹಾಡು ಪ್ರೇಕ್ಷಕರ ಮನ ಗೆದ್ದಿತು. ವಿದ್ಯಾರ್ಥಿಗಳು ವಿಜ್ಞಾನ, ಕಲಾ ವಸ್ತು ಪ್ರದರ್ಶನ ಹಾಗೂ ಆಹಾರ ಮೇಳ ನೋಡುಗರ ಕಣ್ಮನ ಸೆಳೆಯಿತು. ನಂತರ ವಿದ್ಯಾರ್ಥಿಗಳ ಕರಾಟೆ ಪ್ರದರ್ಶನ ಅದ್ಬುತವಾಗಿ ಮೂಡಿ ಬಂತು.ಬಿಸಿಯೂಟ ಯೋಜನಾಧಿಕಾರಿ ಕೆ.ಜಿ.ಆಂಜನೇಯ ಉಪನ್ಯಾಸ ನೀಡಿದರು. ಚಿತ್ರದುರ್ಗ ಬಾಪೂಜಿ ಸಮೂಹ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಕೆ.ಎಂ.ವೀರೇಶ್, ಲೋಕೋಪಯೋಗಿ ಇಲಾಖೆ ಎಇಇ ಕೆ.ನಾಗನಗೌಡ, ಜೆಸ್ಕಾಂ ಎಇಇ ಏಕಾಂತ ರೆಡ್ಡಿ, ಕಸಾಪ ಅಧ್ಯಕ್ಷ ವೀರೇಶ್ ಅಂಗಡಿ, ಕಜಾಪ ಅಧ್ಯಕ್ಷ ಕೆ.ಎಂ.ವೀರೇಶ್, ಪಪಂ ಸದಸ್ಯೆ ರೇಣುಕಾ ದುರುಗೇಶ್, ರಶ್ಮಿ ಆಯುರ್ವೇದಿಕ್ ಕಾಲೇಜು ಪ್ರಾಚಾರ್ಯ ಕೊಟ್ರೇಶ್, ಸನ್ನಿಧಿ ವಿಜ್ಞಾನ ಪದವಿ ಪೂರ್ವ ಕಾಲೇಜು ಪ್ರಾಚಾರ್ಯ ಸಂತೋಷ, ಜ್ಞಾನಭಾರತಿ ವಿದ್ಯಾ ಸಂಸ್ಥೆಯ ಆಡಳಿತಾಧಿಕಾರಿ ಜಿ.ಆರ್. ರಾಜು ಇದ್ದರು.

## ಜ.01 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಜ.01 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯ ಆವರಣದ ಹೊಂಗಿರಣದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಕೂಡ್ಲಿಗಿ ತಾಲ್ಲೂಕಿನ ಖಾನಹೊಸಳ್ಳಿಯ ಸಾಹಿತಿಗಳು ಹಾಗೂ ನಿವೃತ್ತ ಪ್ರಾಂಶುಪಾಲರಾದ ಡಾ.ವೃಷಭೇಂದ್ರಚಾರ್ಯ ಅರ್ಕಸಾಲಿ ಅವರು ವಿಶೇಷ ಉಪನ್ಯಾಸ ನೀಡುವರು. ಕಾರ್ಯಕ್ರಮದಲ್ಲಿ ಕಂಪ್ಲಿ ತಾಲ್ಲೂಕಿನ ಎಮ್ಮಿಗನೂರಿನ ರಾಜು ತಂಡದಿಂದ ಭಕ್ತಿ ಸಂಗೀತ ಇರಲಿದೆ.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ಅಂಗನವಾಡಿ ಕಾರ್ಯಕರ್ತೆ, ಸಹಾಯಕರ ಹುದ್ದೆಯ ಪೂರ್ಣಗೊಂಡ ಅರ್ಜಿಗಳನ್ನು ಮರುಸಲ್ಲಿಸಲು ಅವಕಾಶ

■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ವಿವಿಧ ತಾಲೂಕಿನಲ್ಲಿ ಖಾಲಿ ಇದ್ದ ಅಂಗನವಾಡಿ ಕಾರ್ಯಕರ್ತೆ ಮತ್ತು ಅಂಗನವಾಡಿ ಸಹಾಯಕರ ಹುದ್ದೆಗಳಿಗೆ ಸಲ್ಲಿಸಿದ್ದ ಅಪೂರ್ಣಗೊಂಡ ಅರ್ಜಿಗಳನ್ನು ಮರು ಸಲ್ಲಿಸಲು ಅವಕಾಶ ನೀಡಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಎಸ್.ಶ್ವೇತಾ ತಿಳಿಸಿದ್ದಾರೆ.

ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರು ಜಿಲ್ಲೆಯ ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಕೂಡ್ಲಿಗಿ, ಹರಪನಹಳ್ಳಿ, ಕೊಟ್ಟೂರು ತಾಲೂಕಿನಲ್ಲಿ ಈಗಾಗಲೇ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ಅರ್ಜಿ ಸಲ್ಲಿಸುವ ವೇಳೆಯಲ್ಲಿ ಕೆಲವು ತಾಂತ್ರಿಕ ಸಮಸ್ಯೆಯಿಂದಾಗಿ ಬಹುತೇಕರ ಅರ್ಜಿಗಳಲ್ಲಿ ಭಾವಚಿತ್ರ, ಸಹಿ ಮತ್ತು ದಾಖಲೆಗಳ ಮಾಹಿತಿ ಸಲ್ಲಿಸುವಲ್ಲಿ ಅಪೂರ್ಣಗೊಂಡಿವೆ. ಹಾಗಾಗೀ ಈ ಪ್ರಕ್ರಿಯೆ ಪೂರ್ಣಗೊಳಿಸಲು ಡಿ.26 ರಿಂದ ಜ.5 ರವರೆಗೆ ಮರು ಅರ್ಜಿ ಪೂರ್ಣವಾಗಿ ಸಲ್ಲಿಸಲು ಅನ್‌ಲೈನ್ ವೈಬ್‌ಸೈಟ್‌ನಲ್ಲಿ ಅವಕಾಶ ನೀಡಲಾಗಿದೆ. ವೈಬ್‌ಸೈಟ್: https://karnemakaone.kar.nic.in/abcd/ ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಜಿಲ್ಲೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗಳಿಗೆ ಸಂಪರ್ಕಿಸಬೇಕಾಗಿ ತಿಳಿಸಿದ್ದಾರೆ.

## ಡಿ.29 ರಂದು ಗೆಜೆಟೆಡ್ ಪ್ರೊಬೆಷನರ್ ಗ್ರೂಪ್ ಎ.ಬಿ.ವೃಂದದ ಹುದ್ದೆಗಳ ಪೂರ್ವಭಾವಿ ಮರುಪರೀಕ್ಷೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಸುವ 2023–24 ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ ಗ್ರೂಪ್‌ನ 'ಎ' ಮತ್ತು 'ಬಿ' ವೃಂದದ ಹುದ್ದೆಗಳ ಪೂರ್ವಭಾವಿ ಮರು ಪರೀಕ್ಷೆ ಡಿ.29 ರಂದು ನಡೆಯಲಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಹೊಸಪೇಟೆ ಹಾಗೂ ಹಗರಿಬೊಮ್ಮನಹಳ್ಳಿಯಲ್ಲಿ ನಡೆಯಲಿರುವ ಒಟ್ಟು 23 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲು ಸಿದ್ದತೆ ಮಾಡಲಾಗಿದೆ. ಡಿ.29 ರಂದು ಪತ್ರಿಕೆ–1 ಬೆಳಿಗ್ಗೆ 10 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಮತ್ತು ಪತ್ರಿಕೆ–2 ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆಪರೀಕ್ಷೆಗಳುನಡೆಯಲಿವೆ.ಪರೀಕ್ಷಾಅವ್ಯವಹಾರಗಳನ್ನು ತಡೆ ಗಟ್ಟಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತ–ಮುತ್ತಲಿನ 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಮುತ್ತಲಿನ ಜೆರಾಕ್ಸ್ ಮತ್ತು ಕಂಪ್ಯೂಟರ್, ಸೈಬರ್ ಅಂಗಡಿಗಳನ್ನು ಮುಚ್ಚಲು ಆದೇಶ ಹೊರಡಿಸಲಾಗಿದೆ ಎಂದು ತಿಳಿಸಿದ್ದಾರೆ.

# ಕುಂಬಳ ಕಲ್ಲಂಗಡಿ ಲಾಭದಾಯಕ ಬೆಳೆ

### ಕಲ್ಲಂಗಡಿ ಬೆಳೆಯ ಸುಧಾರಿತ ಬೇಸಾಯ ಕ್ರಮಗಳು | ರೈತರಿಗೆ ಸಲಹೆಗಳು



■ **ಹಂಪಿ ಟೈಮ್ಸ್ ಕೊಪ್ಪಳ**

ಕಲ್ಲಂಗಡಿ ಬೆಳೆಯ ಸುಧಾರಿತ ಬೇಸಾಯ ಕ್ರಮಗಳ ಕುರಿತು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಜಿಲ್ಲೆಯ ರೈತರಿಗೆ ಅಗತ್ಯ ಸಲಹೆಗಳನ್ನು ನೀಡಲಾಗಿದೆ.

ಕೊಪ್ಪಳ ಜಿಲ್ಲೆಗೆ ಕಲ್ಲಂಗಡಿ ಒಂದು ಮುಖ್ಯವಾದ ಕುಂಬಳ ಜಾತಿಯ ಅತ್ಯಂತ ಲಾಭದಾಯದ ಅಲ್ಪಾವಧಿ ಬೆಳೆಯಾಗಿದೆ. ಇತ್ತೀಚೆಗೆ ಕಲ್ಲಂಗಡಿಯನ್ನು ವರ್ಷಪೂರ್ತಿ ಬೆಳೆಯಲಾಗುತ್ತಿದ್ದು, ಹಲವಾರು ಕಂಪನಿಗಳು ಬೀಜೋತ್ಪಾದನೆಯಲ್ಲಿ ತೊಡಗಿಸಿಕೊಂಡಿವೆ.

ಕಲ್ಲಂಗಡಿ ಒಂದು ಚಳಿಗಾಲದ ಬೆಳೆಯಾಗಿದ್ದು, ಅಕ್ಟೋಬರ್ ನಿಂದ ಜನವರಿವರೆಗೂ ಉತ್ತಮ ಇಳುವರಿ ಪಡೆಯಬಹುದಾಗಿದೆ. ಶ್ರೀ ಗವಿಸಿದ್ದೇಶ್ವರ ಜಾತ್ರೆಗೆ ಹಣ್ಣುಗಳು ಬರುವಂತೆ ಯೋಜನೆ ಹಾಕಿಕೊಂಡಲ್ಲಿ ರೈತರಿಗೆ ಹೆಚ್ಚಿನ ಲಾಭದೊರೆಯುತ್ತದೆ. ಕಲ್ಲಂಗಡಿಯನ್ನು ಸಾಮಾನ್ಯವಾಗಿ ಮಸಾರಿ ಮತ್ತು ಮರಳು ಮಿಶ್ರಿತ ಕಪ್ಪು ಮಣ್ಣು ಮತ್ತು ನೀರು ಬಸಿದು ಹೋಗುವ ಮಣ್ಣು ಮತ್ತು ಕೆರೆ ಹಾಗೂ ನದಿ ತೀರ ಪ್ರದೇಶಗಳಲ್ಲಿ ಉತ್ತಮವಾಗಿ ಬೆಳೆಯಬಹುದಾಗಿದೆ. ಮಣ್ಣಿನ ರಸ ಸಾರ 6 ರಿಂದ 7, ಉಷ್ಣಾಂಶ 15 ಡಿ.ಸೆ. ಯಿಂದ 40 ಡಿ.ಸೆ., ಆರ್ದ್ರತೆ ಶೇ. 60 ರಿಂದ 70 ಮತ್ತು ಮಳೆಯ ಪ್ರಮಾಣ 200 ಮಿ.ಮಿ. ಯಿಂದ 650 ಮಿ.ಮಿ., ಹೆಚ್ಚು ಉಷ್ಣ ಹಾಗೂ ಬಿಸಿಲು ಇರುವ ವಾತಾವರಣ ಸೂಕ್ತ.

ಕಲ್ಲಂಗಡಿಯಲ್ಲಿ ಮುಖ್ಯವಾದ ತಳಿಗಳಲ್ಲಿ ಎರಡು ವಿಧಗಳಿವೆ. ನಾಮಧಾರಿತರಹದ ತಳಿಗಳು, ಕಪ್ಪು ಬಣ್ಣದ ಕೆಂಪು ಮತ್ತು ಕಡು ಕೆಂಪು ತಿರುಳು ಹೊಂದಿರುವ ತಳಿಗಳು. ಅಲ್ಲದೇ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಿಂದ ಅರ್ಕಾ ಮಾಣಿಕ್ ಮತ್ತು ಅರ್ಕಾ ಮುತ್ತು ಎನ್ನುವ ತಳಿಗಳು ಪ್ರಮುಖವಾಗಿವೆ. ಇದಲ್ಲದೇ ಅನೇಕ ಖಾಸಗಿ ಕಂಪನಿಗಳ ಸಂಕರಣ ತಳಿಗಳು ಮಾರುಕಟ್ಟೆಯಲ್ಲಿ ಲಭ್ಯವಿರುತ್ತವೆ. ಕಲ್ಲಂಗಡಿ ಬೆಳೆಯನ್ನು 2.5 ಮೀ ರಿಂದ 3 ಮೀ * 1 ಮೀ ಅಂತರದಲ್ಲಿ ಏರು ಮಡಿ ಮಾಡಿ ಪ್ಲಾಸ್ಟಿಕ್ ಹೊದಿಕೆ ಹಾಕಿ ಬೆಳೆಯುವುದು ಆಧುನಿಕ ಪದ್ಧತಿಯಾಗಿದೆ. ಇದರಿಂದ ಕೀಟ ಮತ್ತು ರೋಗಗಳ ಪರಿಣಾಮಕಾರಿ ನಿಯಂತ್ರಣ ಮಾಡಬಹುದಾಗಿದೆ. ಎಕರೆಗೆ ಬೇಕಾಗುವ ಬೀಜಗಳ ಪ್ರಮಾಣ ಸಂಕರಣ ತಳಿಗಳಾದಲ್ಲಿ 300 ರಿಂದ 400 ಗ್ರಾಂ ಮತ್ತು ಇತರೆ ತಳಿಗಳಾದಲ್ಲಿ 750 ಗ್ರಾಂ.

ಆದಷ್ಟು ಕೊಟ್ಟಿಗೆ ಮತ್ತು ಸಾವಯವ ಗೊಬ್ಬರ ಅಲ್ಲದೇ ಎರೆಹುಳು ಗೊಬ್ಬರಗಳನ್ನು ಜೈವಿಕ ಗೊಬ್ಬರಗಳಾದ ಟ್ರೈಕೊಡರ್ಮ, ಸೂಡೊಮೋನಾಸ್ ಮತ್ತು ವ್ಯಾಮ್ ನೊಂದಿಗೆ ಸಮೃದ್ಧಿಗೊಳಿಸಿ ಬಳಸುವುದರಿಂದ ರೋಗ ಮತ್ತು ಕೀಟದ ಬಾಧೆಯನ್ನು ತಡೆಗಟ್ಟಬಹುದು. ಪ್ರತಿ ಎಕರೆಗೆ 1 ಕ್ವಿ. ಬೇವಿನ ಹಿಂಡಿ ಬೆರೆಸುವುದು ಸೂಕ್ತ. ಬಿತ್ತನೆ ಮಾಡಿದ 20 ರಿಂದ 30 ದಿನಗಳೊಳಗೆ ಕುಡಿ ಚಿವುಟುವದರಿಂದ ಹೆಚ್ಚಿನ ಇಲುಕುಗಳು ಬಿಟ್ಟು ಇಳುವರಿ ಹೆಚ್ಚಾಗುವುದು ಅಲ್ಲದೇ ಕೀಟಗಳ ಬಾಧೆಯನ್ನು ತಡೆಗಟ್ಟಬಹುದು. ಬಳ್ಳಿಗೆ 7 ರಿಂದ 8 ಗಿಣ್ಣುಗಳ ಬಿಡುವ ಹೂವುಗಳು ಫಲಪ್ರದವಾಗಿರುತ್ತವೆ ಮತ್ತು 11 ಗಿಣ್ಣಿನ ನಂತರ ಬರುವ ಹೆಣ್ಣು ಹೂವುಗಳನ್ನು ತೆಗೆಯುವುದು ಸೂಕ್ತ.

**ಹೆಚ್ಚಿನ ಇಳುವರಿಗಾಗಿ ಸಲಹೆ:** ಹೆಚ್ಚಿನ ಇಳುವರಿಗಾಗಿ ಕೆಲವು ಸಲಹೆಗಳನ್ನು ಅನುಸರಿಸಲು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಜ್ಞಾನಿಗಳು ತಿಳಿಸುತ್ತಾರೆ. ಥ್ರಿಪ್ಸ್ ನುಸಿಯನ್ನು ಆರಂಭ ಹಂತದಿಂದಲೇ ನಿಯಂತ್ರಿಸುವುದು ಬಹಳ ಮುಖ್ಯ. ಕಸ ರಹಿತ ತೋಟ ಕೀಟಗಳನ್ನು ಹತೋಟಿ ಮಾಡುತ್ತದೆ. ಹೊಲದ ಸುತ್ತಲೂ 1 ತಿಂಗಳ ಮೊದಲೇ ಮೆಕ್ಕೆ ಜೋಳ ಅಥವಾ ಸಜ್ಜೆ ಬೀಜಗಳನ್ನು 4 ಸಾಲು ಬಿತ್ತನೆ ಮಾಡಬೇಕು. ಎರಡು ವರ್ಷಗಳ ನಂತರ ಬೆಳೆ ಪರಿವರ್ತನೆ ಮಾಡಬೇಕು ಇದಕ್ಕಾಗಿ ದ್ವಿದಳ ಧಾನ್ಯಗಳನ್ನು ಬೆಳೆಯುವುದು ಸೂಕ್ತ. ಕೀಟ ನಾಶಕಗಳನ್ನು ಬಳಸುವಾಗ ಬಳ್ಳಿಗಳ ತುದಿಗಳ ಮೇಲೆ ಸಿಂಪಡಿಸಬೇಕು. 2 ರಿಂದ 3 ಬಾರಿ ಬಳ್ಳಿಯ ತುದಿಗಳನ್ನು ಅಂತರ ವ್ಯಾಪಿ ಕೀಟ ನಾಶಕಗಳಲ್ಲಿ ಅದ್ದಿ ತೆಗೆಯಬೇಕು.

ಎಕರೆಗೆ 4 ರಿಂದ 6 ಹಳದಿ ಮತ್ತು ನೀಲಿ ಬಣ್ಣದ ಅಂಟು ಕಾರ್ಡುಗಳನ್ನು ಬಳಸಬೇಕು. ಲಘು ಪೋಷಕಾಂಶಗಳಾದ ಬೋರಾನ್ ಮತ್ತು ಕ್ಯಾಲ್ಸಿಯಂನ್ನು ತಜ್ಞರ ಸಲಹೆಯಂತೆ ಬಳಸಬೇಕು. ನೀರಿನ ನಿರ್ವಹಣೆ ಬಹಳ ಮುಖ್ಯವಾಗಿರುವುದರಿಂದ ಹೂವಾಡವು ಹಂತದಲ್ಲಿ, ಹಣ್ಣು ಬಿಡುವ ಹಂತದಲ್ಲಿ ಮತ್ತು ಹಣ್ಣು ಬಲಿಯುವ ಹಂತದಲ್ಲಿ ಮಣ್ಣನ್ನು ಆದರಿಸಿ ನೀರು ಕೊಡಬೇಕು. ಬಿತ್ತನೆ, ನಾಟಿ ಮಾಡಿದ 15 ದಿನಗಳ ನಂತರ ನೀರಿನಲ್ಲಿ ಕರಗುವ ಗೊಬ್ಬರಗಳನ್ನು ಸಿಂಪಡಿಸುವುದರಿಂದ ಹೆಚ್ಚಿನ ಇಳುವರಿಯನ್ನು ಪಡೆಯಬಹುದಾಗಿದೆ. ಪ್ರತಿ ಎಕರೆಗೆ 1 ರಿಂದ 2 ಜೇನು ಪೆಟ್ಟಿಗೆಗಳನ್ನು ಇಡುವುದರಿಂದ ಉತ್ತಮ ಇಳುವರಿ ಪಡೆಯಬಹುದು. ಪ್ರತಿ ಬಳ್ಳಿಗೆ 2 ಆರೋಗ್ಯಯುತ ಕಾಯಿಗಳನ್ನು ಬಿಟ್ಟು ಉಳಿದವುಗಳನ್ನು ಕತ್ತರಿಸಬೇಕು. ಕಾಯಿಗಳು ನಿಂಬೆಹಣ್ಣಿನ ಗಾತ್ರದಲ್ಲಿದ್ದಾಗ ಜಿಬ್ಬರ್ಲಿಕ್ ಆಮ್ಲ 20 ಪಿ.ಪಿ.ಎಮ್. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಕೃಷಿ ವಿಸ್ತರಣಾ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಎಂ.ವಿ.ರವಿ ಮೊ.ನಂ. 9480247745 ಮತ್ತು ಸಹಾಯಕ ಪ್ರಾಧ್ಯಾಪಕ ವಾಮನ ಮೂರ್ತಿ ಮೊ.ನಂ. 8217696837 ಇವರನ್ನು ಸಂಪರ್ಕಿಸಬಹುದಾಗಿದೆ.

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
SSLC ಈ ಬಾರಿ ಫಲಿತಾಂಶ ನಮ್ಮದೆ
visit our website at www.hampitimes.com / epaper.hampitimes.com

ವಿಜ್ಞಾನ ಚಿತ್ರ ಸ್ಪರ್ಧೆ-5

10ನೇ ತರಗತಿ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲು ಒಂದು ಉತ್ತಮ ಅವಕಾಶ!

ವಿಜ್ಞಾನ ಕಲಿಕೆಯು ಕೇವಲ ಪಠ್ಯಪುಸ್ತಕ ಓದುವುದು ಮತ್ತು ಪರೀಕ್ಷೆ ಬರೆಯುವುದಕ್ಕೆ ಸೀಮಿತವಲ್ಲ. ಅದು ಸೃಜನಾತ್ಮಕತೆಯನ್ನು ಬೆಳೆಸುವ ಮತ್ತು ತತ್ವಗಳನ್ನು ತಾತ್ವಿಕವಾಗಿ ಅರ್ಥಮಾಡಿಕೊಳ್ಳುವ ಒಂದು ಪ್ರಕ್ರಿಯೆ. 10ನೇ ತರಗತಿ ವಿದ್ಯಾರ್ಥಿಗಳಿಗೆ, ಪರೀಕ್ಷೆಯ ಸಿದ್ಧತೆಯನ್ನು ಬೆಂಬಲಿಸಲು ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಹಂಪಿ ಟೈಮ್ಸ್ ಬಳಗದಿಂದ "ವಿಜ್ಞಾನ ಚಿತ್ರ ಸ್ಪರ್ಧೆ" ಆಯೋಜಿಸಲಾಗಿದೆ.

-: ಈ ವಾರದ (27-12-2024) ಚಿತ್ರ ಸ್ಪರ್ಧೆ - 5 : -
ತಾಮ್ರದ ವಿದ್ಯುತ್ ವಿಭಜನೀಯ ಶುದ್ಧೀಕರಣ ಮಾಡುವ ಉಪಕರಣದ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ

-: ಸೂಚನೆಗಳು :-

1. ವಿದ್ಯಾರ್ಥಿಯು 2024-25 ಶೈಕ್ಷಣಿಕ ಸಾಲಿನಲ್ಲಿ 10ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿರಬೇಕು.
2. ಶಿಕ್ಷಕರ/ಶಿಕ್ಷಕಿಯರ ಸಮ್ಮುಖದಲ್ಲಿ ನಿಗದಿತ ಸಮಯ (10 ನಿಮಿಷ) ದಲ್ಲಿ ಶುಕ್ರವಾರದಂದು ಶಾಲೆಯಲ್ಲಿ ಚಿತ್ರವನ್ನು A4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ನಿಂದ ಬಿಡಿಸಬೇಕು
3. ಆಯಾ ಶಾಲೆಯಲ್ಲಿ ಆಯ್ಕೆಯಾದ ಅತ್ಯುತ್ತಮವಾದ ಒಂದು ಚಿತ್ರ ಮಾತ್ರ ಗುರುಗಳು ಆಯ್ಕೆ ಮಾಡಿ , ಮುಖ್ಯ ಶಿಕ್ಷಕರು/ಶಿಕ್ಷಕರ ಸಹಿಯೊಂದಿಗೆ ವಾಟ್ಸ್‌ಪ್ ನಂಬರಿಗೆ ಕಳುಹಿಸಬೇಕು. ಹೆಚ್ಚಿನ ಚಿತ್ರಗಳಿಗೆ ಅವಕಾಶವಿರುವುದಿಲ್ಲ.
4. ಆಯ್ಕೆಯಾದ ಚಿತ್ರದೊಂದಿಗೆ ವಿದ್ಯಾರ್ಥಿಯ ಫೋಟೊ ಹೆಸರು, ಶಾಲೆಯ ವಿಳಾಸ ಮತ್ತು ವಿಜ್ಞಾನ ಮಾರ್ಗದರ್ಶಿ ಶಿಕ್ಷಕರ ಹೆಸರನ್ನು ತಪ್ಪದೇ ಸ್ಪಷ್ಟವಾಗಿ ನಮೂದಿಸಬೇಕು.
5. ತಡವಾಗಿ ಕಳುಹಿಸಿದ ಮತ್ತು ಮಾಹಿತಿ ಕೊರತೆ ಇರುವ ಚಿತ್ರಗಳನ್ನು ಪರಿಗಣಿಸಲಾಗುವುದಿಲ್ಲ.
6. ಆಯ್ಕೆಯಾದ ಅತ್ಯುತ್ತಮವಾದ ಒಂದು ಚಿತ್ರವನ್ನು ಫೋಟೋ ಸಹಿತ ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.
7. ಆಯ್ಕೆ ತಂಡದ ತೀರ್ಮಾನವೇ ಅಂತಿಮವಾಗಿರುತ್ತದೆ.
8. ಮಕ್ಕಳ ಉತ್ತಮ ಶೈಕ್ಷಣಿಕ ಫಲಿತಾಂಶಕ್ಕಾಗಿ ಮುಖ್ಯಗುರುಗಳು ಹಾಗೂ ಶಿಕ್ಷಕರು ನಮ್ಮೊಂದಿಗೆ ಕೈಜೋಡಿಸುತ್ತೀರೆಂಬ ಸದಾಶಯ ನಮ್ಮದು.

ವಿ.ಸೂ: ಶುಕ್ರವಾರ ಸಂಜೆ 6 ಗಂಟೆಯೊಳಗೆ ಅತ್ಯುತ್ತಮ ಚಿತ್ರದ ಫೋಟೋ ತೆಗೆದು ಮೊಬೈಲ್ ಸಂಖ್ಯೆ 9972603099 ಗೆ ಕಳುಹಿಸಬೇಕು. ಹೆಚ್ಚಿನ ಚಿತ್ರಗಳಿಗೆ ಅವಕಾಶವಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9448633038 scan to read epaper.hampitimes.com

ಹಂಪಿ ಟೈಮ್ಸ್ ಬಳಗ, ವಿಜಯನಗರ

ಸಾಮೂಹಿಕವಾಗಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿರುವ ಚಿತ್ರಗಳನ್ನು ಕಳಿಸಬಹುದು